ಸಂಪುಟ: 23 | ಸಂಚಿಕೆ: 01 | ಮಂಡ್ಯ | ಜನವರಿ 2026 | ಪುಟಗಳು: 20

# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ- ಶೈಕ್ಷಣಿಕ-ಮಾಸ ಪತ್ರಿಕೆ

Reg. No.: KARKAN/2013/52928

Post No.: KA/SK/MND/978/2020-2022

## ಅನಂತ ಚೇತನ



- ನೆಮ್ಮದಿ ನಾಶ ಮಾಡಿದ ತೊಂಬತೊಂಬತ್ತು......!
- ಬದುಕಿಗೊಂದು ಗುರಿ ಬೇಕು
- ಏಕದಂತನ ವೇಗಕ್ಕೆ ಕಥೆ ಹೇಳಿದ ವ್ಯಾಸ
- ನಾಗರ ಪಂಚಮಿ 4 ಸರ್ಪಯಾಗ
- ಜನನಿ ಜನ್ಮಭೂಮಿ
- ಏಲೆ




ಧರ್ಮಸ್ಥಳ ಟ್ರಸ್ಟ್‌ನ ಧರ್ಮಾಧಿಕಾರಿಗಳಾದ ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರ ಜೊತೆ
ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಕೀಲಾರ ಮತ್ತು ಕುಟುಂಬದವರು














ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆ, ರೂರಲ್ ಐಟಿ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ, ರಾಜ್ಯ ಮಟ್ಟದ ಲಾನ್ ಟೆನ್ನಿಸ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ, ಮಂಡ್ಯ ವಿಜಯ ಕರ್ನಾಟಕ ಪತ್ರಿಕೆಯ ವತಿಯಿಂದ ನಡೆಸಲಾದ ವಿಕ ಪರಿಸರ ದಿನಾಚರಣೆ ಸ್ಪರ್ಧೆಗಳಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ, ವಿಜ್ಞಾನೋತ್ಸವದಲ್ಲಿ ನಡೆದ “ವಿಜ್ಞಾನ ಕಾವ್ಯ” (Science Poetry) ಸ್ಪರ್ಧೆಯಲ್ಲಿ ತೃತಿಯ ಸ್ಥಾನವನ್ನು ಪಡೆದಿದ್ದಾರೆ. ಅಭಿನವ ಭಾರತಿ ಪ್ರೌಢಶಾಲೆ (ಆಂಗ್ಲ ಮಾಧ್ಯಮ) ಮಂಡ್ಯ.

# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ- ಶೈಕ್ಷಣಿಕ-ಮಾಸ ಪತ್ರಿಕೆ

ಸಂಪುಟ: 23 । ಸಂಚಿಕೆ: 01

ಮಂಡ್ಯ । ಜನವರಿ 2026 । ಪುಟಗಳು: 20

ಪ್ರಕಾಶಕರು ಮತ್ತು ಸಂಪಾದಕರು :

ಶಿವಮೂರ್ತಿ ಕೀಲಾರ

ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್

ಮುದ್ರಕರು :

ಸಿ. ಪ್ರಸನ್ನ, ಸಿರಿ ಡಿಜಿಟಲ್ ಪ್ರಿಂಟರ್ಸ್, ಮಂಡ್ಯ

ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು

ವಿಳಾಸ : ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್,
ಅಭಿನವ ಭಾರತಿ ವಿದ್ಯಾಕೇಂದ್ರ,
ಡಿ ಸಿ ಆಫೀಸ್ ಹಿಂಭಾಗ, ಮಂಡ್ಯ


## -: ಪ ರಿ ವಿ ಡಿ :-


| ಲೇಖನಗಳು | ಪುಟಸಂಖ್ಯೆ |
|---|---|
| 1. ಹೃದಯ ದೌರ್ಬಲ್ಯ ಜೀವನವನ್ನೇ ಅಲ್ಲಾಡಿಸುವುದು. | 4 |
| 2. ಎಲೆ | 5 |
| 3. ಬದುಕಿಗೊಂದು ಗುರಿ ಬೇಕು. | 6 |
| 4. ಏಕದಂತನ ವೇಗಕ್ಕೆ ಕಥೆ ಹೇಳಿದ ವ್ಯಾಸ | 7 |
| 5. ಬದುಕಿನ ಅಮೂಲ್ಯ ಪಾಠ ಕಲಿಸಿಕೊಟ್ಟ ನಿಜ ಜೀವನದ ಎರಡು ಘಟನೆಗಳು | 8 |
| 6. ನಮ್ಮ ಸಂಕಲ್ಪ ನಮಗೇ ತಿಳಿದಿರುವುದು ಅಲ್ಪ | 9 |
| 7. ವಾಸದೇವ ಹಾಗೂ ದೇವಕಿ ಪೂರ್ವ ಜನ್ಮದ ಕರ್ಮದ ಫಲದ ಕಥೆ | 10 |
| 8. ನಾಗರ ಪಂಚಮಿ 4 ಸರ್ಪಯಾಗ | 12 |
| 9. ಜನನಿ ಜನ್ಮಭೂಮಿ | 14 |
| 10. ನೆಮ್ಮದಿ ನಾಶ ಮಾಡಿದ ತೊಂಬತೊಂಬತ್ತು.....! | 17 |
| 11. ದೇವರನ್ನು ನಂಬಿದವರಿಗೆ ಏಕೆ ಹೆಚ್ಚು ಹೆಚ್ಚು ಕಷ್ಟ ಬರುತ್ತದೆ? | 18 |


# ಸಂಪಾದಕೀಯ

### ಕೊರತೆ :

ಒಂದು ಕಾಲದಲ್ಲಿ ಅವರಿಬ್ಬರೂ ಕಿತ್ತು ತಿನ್ನುವ ಬಡತನದಿಂದ ಕಾಲ ಕಳೆಯುತ್ತಿದ್ದರು. ನಾನು ನಿನಗೆ, ನೀನು ನನಗೆ ಅಂತಿದ್ದ ಅವರ ಮನೆಯಲ್ಲಿ ಈಗ ಕೈ ಕಾಲಿಗೊಂದು ಕೆಲಸದಾಳು. ತನ್ನ ಹಳೆಯ ನೆನಪುಗಳನ್ನೆಲ್ಲ ಮೆಲುಕು ಹಾಕಿ ಮರುಗುತ್ತಿದ್ದ ಅವನಲ್ಲಿ ಅದೊಮ್ಮೆ ಅವಳು ಕೇಳಿದಳು. ನಿಮಗೇನಿದೆ ಇಲ್ಲಿ ಕೊರತೆ? ಆತ ನಿಟ್ಟುಸಿರಿಡುತ್ತಾ ಉತ್ತರಿಸಿದ. ನಿನ್ನ ಪ್ರೀತಿ ಮತ್ತು ಅಕ್ಕರೆ.

### ಅಮರ :

ತನ್ನಿಂದ ಎಲ್ಲವನ್ನೂ ಕಲಿತು ಇನ್ನೂ ಆಶ್ರಮದಲ್ಲೇ ಉಳಿದಿದ್ದ ಶಿಷ್ಯನಲ್ಲಿ ಗುರುಗಳೊಮ್ಮೆ ಕೇಳೀದರು. ಶಿಷ್ಯಾ ನಿನಗೆ ಸಾವಿನ ನಂತರವೂ ಬದುಕಬೇಡವೇ? ಆಶ್ಚರ್ಯಚಕಿತನಾದ ಶಿಷ್ಯ ಗುರುಗಳನ್ನೇ ದಿಟ್ಟಿಸುತ್ತ ಕೇಳಿದ. ಅದು ಹೇಗೆ ಸಾಧ್ಯ ಗುರುಗಳೇ

ಹೋಗಿ ನೀನು ಕಲಿತ ಪಾಠವನ್ನೆಲ್ಲ ಜನರಿಗೆ ಹಂಚು. ಅದು ನೀನು ಸತ್ತ ನಂತರವೂ ನಿನ್ನನ್ನು ಅವರೊಳಗೆ ಬದುಕಿಸುತ್ತದೆ. ಗುರುಗಳು ಉತ್ತರಿಸಿದರು.

### ಭಕ್ತಿ :

ಮಂದಿರದ ಮುಂದಿದ್ದ ಭಿಕ್ಷುಕರ ದಯನೀಯತೆ ಕಂಡು ಏನೂ ಕೊಡಲಾಗದ ಬಡವ ಶಿಷ್ಯನೊಬ್ಬ ತನನ್ ಗುರುಗಳ್ಳಲಿ ತನ್ನ ಅಸಹಾಯಕತೆಯನ್ನು ತೋಡಿಕೊಂಡ. ಗುರುಗಳೇ ಭಗವಂತ ಇಷ್ಟು ಒಳ್ಳೆ ಆರೋಗ್ಯ ಕೊಟ್ಟರೂ ನನ್ನಿಂದ ಅವರಿಗೇನು ಸಹಾಯ ಮಾಡಲಾಗಿಲ್ಲ. ಇರುವ ಸಾವಿರದಲ್ಲಿ ಹತ್ತನ್ನು ಭಿಕ್ಷುಕರ ತಟ್ಟೆಗೆ ಎಸೆದು ಬೀಗುವ ಭಿರುಗಳಿಗಿಂತ ಏನೂ ಕೊಡಲಾಗಲಿಲ್ಲವೆಂದು ಕೊರಗುವವನೇ ದೇವರಿಗೆ ಹೆಚ್ಚು ಇಷ್ಟ. ಚಿಂತೆ ಮಾಡಬೇಡ. ಗುರುಗಳು ಅವನನ್ನು ಸಮಾಧಾನಪಡಿಸಿದರು.


**ಶ್ರೀ ಶಿವಮೂರ್ತಿ ಕೀಲಾರ**

ಅಧ್ಯಕ್ಷರು,

ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್(ರಿ)

ಪ್ರಧಾನ ಕಾರ್ಯದರ್ಶಿ,

ಅಭಿನವ ಭಾರತಿ ಶಿಕ್ಷಣ ಟ್ರಸ್ಟ್(ರಿ). ಮಂಡ್ಯ




# ಹೃದಯ ದೌರ್ಬಲ್ಯ ಜೀವನವನ್ನೇ ಅಲ್ಲಾಡಿಸುವುದು.

ಜೀವ ಜಗತ್ತಿನ ದೊಡ್ಡ ಆಸ್ತಿ ಹೃದಯ. ಈ ಹೃದಯವು ಒಂದು ಕ್ಷಣವೂ ನಿಲ್ಲದೇ ತನ್ನ ಕೆಲಸ ಮಾಡುತ್ತಲೇ ಇರಬೇಕಾಗುತ್ತದೆ. ಜೀವಿಗಳ ಬೇರೆ ಯಾವುದೇ ಅಂಗ ಸ್ವಲ್ಪ ಹೊತ್ತು ಕೆಲಸ ಮಾಡದಿದ್ದರೂ ಆದೀತು. ಆದರೆ ಹೃದಯ ಸ್ಥಂಬನ ಆಗಿಬಿಟ್ಟರ ಆ ಜೀವನವೇ ಅಂತ್ಯವಾಗುತ್ತದೆ. ಇದು ರಕ್ತ ಸಂಚಲನಕ್ಕೆ ಸಂಬಂಧಿಸಿದ ಕ್ರಿಯೆ. ಆದರೆ ಮನುಷ್ಯ ಎಲ್ಲ ಜೀವಿಗಳಂತಲ್ಲ. ಅವನ ಹೃದಯದಲ್ಲಿ ಕೇವಲ ಹೃದಯದ ಬಡಿತ, ರಕ್ತ ಸಂಚಲನ ಮಾತ್ರವಲ್ಲ. ಭಾವನೆ ಅನ್ನುವ ಅದ್ಭುತ ಪ್ರಪಂಚ ತುಂಬಿಕೊಂಡಿದೆ. ಒಳ್ಳೆಯದು ಕೆಟ್ಟದ್ದು ಎನ್ನುವ ಭಾಗವು ಆ ನಂತರದ್ದು. ಈಗ ಭಾವನೆ ಅನ್ನುವುದು ಮಾತ್ರ ಮುಖ್ಯ. ಆ ಭಾವನೆ ಗಟ್ಟಿತನದಿಂದ ಕೂಡಿದೆಯೋ ದೌರ್ಬಲ್ಯದಿಂದ ಕೂಡಿದೆಯೋ ಅನ್ನುವುದರ ಮೇಲೆ ಒಬ್ಬ ಮನುಷ್ಯನ ಅಸ್ತಿತ್ವವನ್ನೇ ನಿರ್ಮಾಣ ಮಾಡಿ ಬಿಡುತ್ತದೆ.

ಈ ಹೃದಯದ ಮಾತು ಒಂದು ರೀತಿ ವಿಚಿತ್ರವಾದದ್ದು. ಯಾವುದು ಬೇಡ ಬೇಡ ಅನ್ನುತ್ತೇವೆಯೋ ಅದನ್ನು ಪಾಲಿಸಲು ಮುಂದಾಗಿ ಬಿಡುತ್ತದೆ. ಯಾವುದು ಬೇಕು ಅನ್ನುತ್ತದೆಯೋ ಅದನ್ನು ವಿರೋಧಿಸುವುದು ಉಂಟು. ಏಕಾರತೆಯೇ ಇದಕ್ಕೆ ಕಾರಣವಾಗಿದೆ. ಆದರೂ ಮನುಷ್ಯ ಎಷ್ಟೇ ಸದೃಢನಾಗಿದ್ದರೂ, ವಿವೇಕವುಳ್ಳವನಾದ್ದರೂ ಹೃದಯವು ಒಮ್ಮೊಮ್ಮೆ ಹೃದಯವು ದುರ್ಬಲವಾಗಿಬಿಡುತ್ತದೆ.

ಒಬ್ಬ ನಾಸ್ತಿಕನಿದ್ದನು. ಅವನಿಗೆ ವಿಪರೀತ ಹೊಟ್ಟೆ ಶೂಲೆ ಕಾಣಿಸಿತು. ತನ್ನು ಮನೆಯ ಹತ್ತಿರ ಇರುವ ವೈದ್ಯರನ್ನು ಕಂಡು ಚಿಕಿತ್ಸೆ ಮಾಡಿಕೊಂಡನು. ಕಡಿಮೆ ಆಗದಿರುವಾಗ ಊರಿನ ಅಕ್ಕ ಪಕ್ಕದಲ್ಲಿರುವ ವೈದ್ಯರ ಬಳ್ಳಿ, ಹಳ್ಳಿ ಮದ್ದು ಮಾಡಿದನು. ಆಗಲೂ ಆ ಹೊಟ್ಟೆ ನೋವು ಕಡಿಮೆ ಆಗದೆ ದಿನದಿಂದ ದಿನಕ್ಕೆ ಹೆಚ್ಚಾಗುತಿತ್ತು. ಪರಿಚಿತರು ಹೇಳಿದ್ದೆಲ್ಲ ಔಷಧ ಮಾಡುತ್ತ ನಂತರ ಬೆಂಗಳೂರು ಮಂಗಳೂರು ಅನ್ನದೆ ದೊಡ್ಡ ಆಸ್ಪತ್ರೆಯ ಮೆಟ್ಟಲು ಹತ್ತಿದನು. ದಿನದಿಂದ ದಿಕ್ಕೆ ಹೊಟ್ಟೆ ಶೂಲೆ ಹೆಚ್ಚಾಯಿತೆ ವಿನಃ ಕಡಿಮೆ ಆಗಲಿಲ್ಲಿ. ಯಾರೋ ಒಬ್ಬರು ಬಸ್ಸಿನಲ್ಲಿ ಕುಳಿತಾಗ ನಮ್ಮೂರಿನಲ್ಲಿ ಒಬ್ಬರು ನಾಟಿಔಷಧ ಕೊಡ್ತಾರೆ. ಒಳ್ಳೆ ಪರಿಣಾಮ ಬೀರುತ್ತದೆ. ಇವತ್ತೆ ಬಂದರೆ ತಾನು ಕರೆದುಕೊಂಡು ಹೋಗುವೆ ಅಂದರು. ಹೊಟ್ಟೆ ನೋವು ಕಡಿಮೆ ಆದರೆ ನಾಕು ಎಂದು ಆವರೂಟ್ಟಿಗೆ ಅವರ ಒಪ್ಪಲಿಲ್ಲ. ದೇವರು ದಿಂಡಿರೆಲ್ಲ ಸುಳ್ಳು. ನಾನು ಹನುಮಂತ ದೇವರನ್ನು ನೆನೆಯುತ್ತ ಔಷಧ ಕುಡಿಯುವುದಾದರು ಈ ಔಷಧವೇ ಬೇಡ ಅಂದ.

ಆಗ ವೈದ್ಯರು ಹಾಗಾದರೆ ನೀವು ಯಾವ ಕಾರಣಕ್ಕೂ ಹನುಮನನ್ನು ನೆನೆಯಲೇ ಬಾರದು. ನೆನೆಯದೇ ಈ ಔಷಧವನ್ನು ಕುಡಿಯಲು ಆರಂಭಿಸಿದ. ಆದರೆ ಔಷಧ ಕುಡಿಯುವ ಮೊದಲು ಬೇಡವೆಂದರೂ ಮನಸ್ಸಿನ ಆಳದಲ್ಲಿ ಹನುಮಂತ ದೇವರು ಬಂದು ಬಿಡುತ್ತಿದ್ದ. ಛೀ ಇವನೊಬ್ಬ ಹನುಮ ಅನ್ನುತ್ತಲೇ ಔಷಧ ಕುಡಿದ. ಆರೋಗ್ಯವಂತನಾದ. ಮತ್ತೆ ಅದೇ ವೈದ್ಯರ ಬಳಿ ಬಂದು ಹೇಳಿದ ನೋಡಿ ನಾನು ಹನುಮನನ್ನು ನೆನೆಯದೆ ಔಷಧ ಕುಡಿದು ಅರಾಮಾದೆ ಅಂದ.



**ಶುಭ ಗಿರಣಿಮನೆ**
**ಉಮ್ಮಚಗಿ,**
**ಯಲ್ಲಾಪುರ ತಾಲೂಕು**
**ಉತ್ತರಕನ್ನಡ ಜಿಲ್ಲೆ**

ಆಗ ವೈದ್ಯರು ನಕ್ಕು, ನಿಜ ಹೇಳು ಔಷಧ ಕುಡಿದ. ಆರೋಗ್ಯವಂತನಾದ. ಮತ್ತೆ ಅದೇ ವೈದ್ಯರ ಬಳಿ ಬಂದ ಹೇಳಿದ "ನೋಡಿ ನಾನು ಹನುಮನನ್ನು ನೆನೆಯದೆ ಔಷಧ ಕುಡಿದು ಅರಾಮಾದೆ" ಅಂದ. ಆಗ ವೈದ್ಯರು ನಕ್ಕು "ಹೇಳು ಔಷಧ ಕುಡಿಯುವಲ್ಲೆಲ್ಲ ಈ ಹನುಮನನ್ನು ನೆನೆಯಬೇಕಲ್ಲ ಅಂತ ನಿತ್ಯವೂ ಕೋಪದಲೇ ಬೇಸರದಲ್ಲೆ ನೆನಯುತ್ತ ಔಷಧ ಕುಡಿದೆ ಅಲ್ಲವೆ"ಎಂದರು. ಆಗ ಅವನು ತಲೆ ತಗ್ಗಿಸಿದ. ಅಂದರೆ ಈ ಹೃದಯದೊಳಿರುವ ಮನಸ್ಸಿನ ಭಾವನೆಯನ್ನು ಯಾರೂ ಕಟ್ಟಿ ಹಾಕಲು ಸಾಧ್ಯವಿಲ್ಲ. ಅದು ಬೇಡ ಅಂದಿದ್ದನ್ನು ಬಹಳ ಬೇಗ ಮತ್ತು ಬಾರಿ ಜ್ಞಾಪಿಸುತ್ತದೆ. ಒಂದು ಹಂತಕ್ಕೆ ಅವನು ಕೇಳಲಿಲ್ಲ. ಇದೇ ತನ್ನ ದೌರ್ಬಲ್ಯ ಎಂದು ಆತನಿಗೇ ಗೊತ್ತಿಲ್ಲ. ಅವನ ದೌರ್ಬಲ್ಯ ಸ್ಥಿತಿ ವೈದ್ಯರಿಗೆ ಗೊತ್ತಾಗಿಯೇ

ನಾನು ಔಷಧ ಕುಡಿಯುವಾಗ ಹನುಮನನ್ನು ನೆನೆಯಲೇ ಬೇಡ ಎಂದು ಒತ್ತಿ ಒತ್ತಿ ಹೇಳಿ ಕಳಿಸಿದ್ದರು.

ಮನಸ್ಸು ಚಂಚಲ. ಒಂದೇ ಕಡೆಹಿಡಿದು ನಿಲ್ಲಿಸುವುದು ಸುಲಭವಲ್ಲ. ಹಾಗಿರುವಾಗ ದುರ್ಬಲ ಮನಸ್ಸಾದರಂತು ಅದು ತನ್ನದೇ ಹಾದಿಯಲ್ಲಿ ಯೋಚಿಸುತ್ತದೆ. ಅದೆಷ್ಟೇ ಚೆನ್ನಾಗಿ ಓದಿಕೊಂಡಿದ್ದರೂ



ಅಯ್ಯೋ ನಾನು ಈ ಪರೀಕ್ಷೆಯಲ್ಲಿ ಪಾಸಾಗುತಿನೋ ಇಲ್ಲವೋ ಅನ್ನುವ ಭಯ ಮಕ್ಕಳಿಗೆ ಹುಟ್ಟಿಸುತ್ತದೆ. ಉತ್ತಮವಾಗಿ ಕೆಲಸ ಮಾಡುತ್ತಿದ್ದರೂ ಬರುವ ವರ್ಷ ತನಗೆ ಸಿಗುವ ಪ್ರಮೋಷನ್ ಸಿಗುತ್ತೋ ಇಲ್ಲವೋ ಅನ್ನುವ ಗೊಂದಲ ಮೂಡಿಸುತ್ತದೆ. ಅಕ್ಕ ಪಕ್ಕದ ಮನೆಯವರು ನಮ್ಮದೇ ಜನರಾಗಿದ್ದು ಆಸ್ತಿ ಪ್ರಕರಣ ದಾಖಲಾದಾಗ ಅವರೊಟ್ಟಿಗೆ ಹೊರಾಡಬೇಕೋ ಅಥವಾ ಸುಮ್ಮನಿದ್ದು ಅವರಿಷ್ಟದಂತೆ ನಡೆಯಲು ಬಿಡಬೇಕೋ ಎನ್ನುವ ನೋವು ಕಾಡುತ್ತದೆ.

ಕ್ಲೈಬ್ಯಂ ಮಾಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೆ। ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೊತ್ತಿಷ್ಠ ಪರಂತಪ॥" ಎನ್ನುವ ಸಾಲು ಭವದ್ಗೀತೆಯ ಸಾಂಖ್ಯಯೋಗದದಲ್ಲಿ ಎರಡನೇ ಅಧ್ಯಾಯದ ಮೂರನೇ ಶ್ಲೋಕದಲ್ಲಿ ಬರುತ್ತದೆ.

ಅರ್ಜುನ ಕುರುಕ್ಷೇತ್ರ ಯುದ್ಧ ಮಾಡಲು ಹಿಂದೇಟು ಹಾಕಿದ. ತನ್ನವರನ್ನೇ ತಾನು ತುದ್ದ ಮಾಡಿ ಕೊಲ್ಲುವುದು ಎಷ್ಟು ಸರಿ! ಇದರಿಂದ ಪಾಪ ದೊರೆಯುತ್ತದೆ, ನನ್ನವರನ್ನೇ ಕೊಂದು ಎನ್ನುವ ಕೊರಗು ಜೀವನ ಪರ್ಯಂತ ಉಳಿಯುತ್ತದೆ. ಹಾಗಾಗಿ ಈ ಯುದ್ದವನ್ನು ನಾನು ಮಾಡುವುದಿಲ್ಲ ಎಂದು ಸೋತು ತನ್ನ ಧನಸ್ಸು ಗಾಂಡೀವವನ್ನು ಕೆಳಗೆ ಇಡುತ್ತಾನೆ. ಆಗ ಶ್ರೀ ಕೃಷ್ಣನು ಅರ್ಜುನನಿಗೆ ಎದೆ ಗುಂದದಿರು, ನಿನ್ನ ಹೃದಯ ದೌರ್ಬಲ್ಯದಿಂದ ಮಾನಸಿಕ ದೌರ್ಬಲ್ಯ ಹೊಂದಿ ಕೂರಬೇಡ. ಆ ದೌರ್ಬಲ್ಯವನ್ನು ಬಿಟ್ಟು ಎದ್ದೇಳು ಎಂದು ಉಪದೇಶಿಸುತ್ತಾನೆ.

ಅಂದರೆ ಮನುಷ್ಯನ ಮನಸ್ಸು ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸೋತಾಗ ದುರ್ಬಲವಾಗಿ ಗೊಂದಕ್ಕೆ ಸಿಕ್ಕಿ ಹಾಕ್ಕಿಕೊಳ್ಳುತ್ತದೆ. ಆ ದುರ್ಬಲತೆಯನ್ನು ನೀಗುವುದು ನಾವು ನಮ್ಮೊಳಗೆ ಆಧ್ಯಾತ್ಮಿಕತೆಯನ್ನು ಬೆಳೆಸಿಕೊಂಡಾಗ ಮಾತ್ರ. ★




ಅಲಂಕಾರದ ತೋರಣಕ್ಕೆ ಮಾವಿನೆಲೆ
ಆಯುಷ್ಯದ ಹೂರಣಕ್ಕೆ ಬೇವಿನೆಲೆ
ಇಷ್ಟಪಡುವರು ಊಟಕ್ಕೆ ಬಾಳೆ ಎಲೆ
ಈ ತಲೆಮಾರಿನವರಿಗೆ ಮರೆತಿದೆ ವಿಳ್ಯೇದೆಲೆ
ಉಲ್ಲಾಸ ಹೆಚ್ಚಿಸುವುದು ಚಹಾ ಎಲೆ
ಊನ ಉಂಟುಮಾಡುವುದು ಗಾಂಜಾ ಎಲೆ
ಋಷಿಗಳು ನಿತ್ಯ ಬಳಸಿದರು ತುಳಸಿ ಎಲೆ
ಎಲ್ಲಾ ನೋವು ಕಷಾಯಕ್ಕೆ ಲವಂಗದೆಲೆ

ಏಕಾಂತದಿ ಶಿವನ ಪೂಜಿಸಲು ಬಿಲ್ವಪತ್ರೆ
ಐದಾರು ಅಲರ್ಜಿ ತೋಲಗಿಸಲು ದೊಡ್ಡಪತ್ರೆ ಎಲೆ
ಒಳಗಿದ್ದರೂ ಜಲ ಅಂಟದ ತಾವರೆ ಎಲೆ
ಓಡಿಸುವುದು ಡೆಂಗ್ಯೂನ ಪಪ್ಪಾಯ ಎಲೆ
ಔಷಧಿಗೆ ಬಳಕೆಯಾಗುವುದು ನೂರಾರು ಎಲೆ
ಅಂದವು ಮದುಮಗಳಿಗೆ ಗೋರಂಟಿ ಎಲೆ
ಅಹ, ಶ್ರೀಕೃಷ್ಣನೆ ಬಯಸಿದ್ದುದು ಆಲದೆಲೆ

ಮಧುರ ಪಿ, ಹುಣಸೂರು

# ಬದುಕಿಗೊಂದು ಗುರಿ ಬೇಕು



ಇರುವೆಯೊಂದು ತನಗಿಂತ ದೊಡ್ಡದಾದ ಕಳೊಂದನ್ನು ಹೊರಲಾರದೇ ಹೊತ್ತುಕೊಂಡು ಹೋಗುತ್ತಿತ್ತು ಬಹಳ ದೂರದಿಂದ ಅದು ಆ ಕಾಳನ್ನು ತರುತ್ತಿತ್ತು ಇರುವೆಗೆ ಸುಸ್ತಾಗಿಹೋಗಿತ್ತು. ಕಷ್ಟಪಟ್ಟು ಹಾಗೆಯೇ ಹೋಗುತ್ತಿರುವಾಗ ಒಂದು ಹಕ್ಕಿಯ ಗರಿಯೊಂದು ಹಾರಿ ಬಂದು ಇರುವೆಯ ಪಕ್ಕ ಬಿದ್ದ ಆಗರಿಯನ್ನು ನೋಡಿ ಇರುವೆಗೆ ಸ್ವಲ್ಪ ಅಸೂಯೆಯಾಯಿತು. ಅಲ್ಲ ನಾನು ನೋಡಿದರೆ ಹೀಗೆ ನನ್ನ ಆಹಾರವನ್ನು ಎಳೆದುಕೊಂಡು ಹೋಗುತ್ತಿದ್ದೇನೆ. ಆಗರಿ ನೋಡು ಹೋಗುತ್ತಿದೆ ಅಂದುಕೊಂಡಿತು ಮತ್ತು ಅದನ್ನೇ ಆಗರಿಗೆ ಹೇಳಿತು ನೀನೇ ಅದೃಷ್ಟವಂತ ಆಗ ಆಗರಿ ಜೋರಾಗಿ ನಕ್ಕು ಹೇಳಿತು ನೀನು ಹೇಳಿದ್ದು ಸರಿ ಆದರೆ ಗಾಳಿ ಮನಸ್ಸಿಗೆ ಬಂದ ಕಡೆ ನನ್ನನ್ನು ತೆಗೆದುಕೊಂಡು ಹೋಗಿ ಬಿಸಾಕುತ್ತದಲ್ಲ ನಾನೆಲ್ಲಿಗೆ ಹೋಗಬೇಕು ಅನ್ನುವುದನ್ನು ನಿರ್ಧರಿಸುವ ಸ್ವಾತಂತ್ರ್ಯ ನನಗಿಲ್ಲವಲ್ಲ.

ನೀನೇ ಅದೃಷ್ಟವಂತೆ ನಿನಗೆ ನಿನ್ನದೇ ಆದ ಮನೆ ಇದೆ. ಕಷ್ಟಪಟ್ಟು ಆಹಾರ ಸಂಗ್ರಹಿಸುತ್ತೀ, ಮಳೆಗಾಲದಲ್ಲಿ ಬೆಚ್ಚಗೆ ನಿನ್ನ ಗೂಡೊಳಗೆ ಕೂತು ತಿನ್ನುತ್ತೀ, ವಿಶ್ರಾಂತಿ ಪಡೆಯುತ್ತೀ. ಆದರೆ ನಾನು? ನನಗೆ ನನ್ನದೇ ಆದ ಮನೆಯೂ ಇಲ್ಲ, ಗುರಿಯೂ ಇಲ್ಲ. ಗಾಳಿಕೊಂಡೊಯ್ದತ್ತ ಹೋಗುತ್ತ ಇರುವುದು, ನನ್ನ ಮುಂದಿನ ನಿಲ್ದಾಣ ಯಾವುದೆಂಬ ಊಹೆಯೂ ನನಗಿಲ್ಲ. ಮತ್ತೇನನ್ನೋಹೇಳಲಿಕ್ಕೆ ಹೊರಟಿತ್ತು ಅಷ್ಟು ಹೊತ್ತಿಗೆ ಬಲವಾದ ಗಾಳಿ ಬೀಸಿ ಗರಿಯನ್ನು ಹಾರಿಸಿಕೊಂಡು ಹೋಗಿ ದೂರದ ಒಂದು ಮುಳ್ಳಿನ ಪೊದೆಯ ಮೇಲೆ ಬೀಳಿಸಿತು. ಇರುವೆ ರಸ್ತೆ ಬದಿಯಲ್ಲಿ ತನ್ನ ಪ್ರಯಾಣ ಮುಂದುವರಿಸಿತು.



ಸೌಭಾಗ್ಯ ವಿ
ಬೆಂಗಳೂರು


ನಿಜ, ಬದುಕಿಗಾಗಿ ಕಷ್ಟಪಡುವುದು, ಒತ್ತಡ ಅನುಭವಿಸುವುದು ಇದ್ದೇ ಇರುತ್ತದೆ. ಆದರೆ ಗುರಿಯಿಲ್ಲದ ಸ್ವಾತಂತ್ರ್ಯ ನಮ್ಮನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆ. ಸ್ವಚ್ಛಂದವಾಗಿ ವಿಹರಿಸುತ್ತಿರುವಂತೆ ಕಂಡ ಗರಿಗೆ ತನ್ನ ದಾರಿಯನ್ನಾಗಲೀ ಗುರಿಯನ್ನಾಗಲೀ ನಿರ್ಧರಿಸುವ ಸ್ವಾತಂತ್ರ್ಯವೆಂದರೆ ಬೇಕಾಬಿಟ್ಟಿ ಇರುವುದಲ್ಲ, ಬದುಕಿಗೊಂದು ಗಮ್ಯವಿರಬೇಕು. ಅದನ್ನು ಸಾಧಿಸಲು ಶಿಸ್ತಿರಬೇಕು, ಸತತಪ್ರಯತ್ನವಿರಬೇಕು.

ಯಾರದ್ದೋ ಬದುಕು ಸುಲಭ ಎಂದುಕೊಂಡು ನಮ್ಮ ಬದುಕನ್ನು ನೋಡಿ ಅಳುತ್ತ ಕೂರುವುದು ಮೂರ್ಖತನ. ಹಗುರವಾಗಿ ಹಾರುವ ಆ ಪುಟ್ಟ ರೆಕ್ಕೆಯ ಬದುಕಿನಂತೆ ಸುಖಿಗಳೆಂದು ಕಾಣುವ ಜನರ ಬದುಕಿನಲ್ಲಿ ನಡೆಯುತ್ತಿರುವ ತಲ್ಲಣಗಳು ಬೇರೆಯವರಿಗೆ ಹೋಲಿಸಿಕೊಳ್ಳದೇ ಸವಾಲುಗಳನ್ನು, ಸಂತೃಪ್ತಿಯಿಂದ ಮುನ್ನಡೆಯುವುದು ಅತ್ಯುತ್ತಮ ಆಯ್ಕೆ. ★

# ಏಕದಂತನ ವೇಗಕ್ಕೆ ಕಥೆ ಹೇಳಿದ ವ್ಯಾಸ

ಶುಭಶ್ರೀ ಬಟ್ಟೆ

ಮಹಾಭಾರತ ಯುದ್ಧ ಮುಗಿದ ನಂತರ ವೇದವ್ಯಾಸರು ತಮ್ಮ ಅಗಾಧ ತಪಸ್ಸಿನ ಶಕ್ತಿಯ ಫಲದಿಂದ ಮೊಮ್ಮಕ್ಕಳ ಕಾಲಾನಂತರವೂ ಆರೋಗ್ಯವಂತರಾಗಿ ಹಿಮಾಲಯದ ತಪ್ಪಲಿನಲ್ಲಿ ವಾಸಿಸುತ್ತಿದ್ದರು. ಆ ಸಮಯದಲ್ಲಿ ಸೃಷ್ಟಿಕರ್ತ ಬ್ರಹ್ಮದೇವ ಮಹಾಭಾರತ ಯುದ್ಧದ ಕುರಿತು ಕೃತಿ ರಚಿಸಲು ಬಯಸಿದರು. ಈ ಶ್ರೇಷ್ಠ ಕೃತಿ ಬರೆಯಲು ಆ ಮಹಾಯುದ್ಧದ ಪ್ರತ್ಯಕ್ಷದರ್ಶಿ ಮತ್ತು ಅಲ್ಲಿ ಬರುವ ಪ್ರತಿ ಪಾತ್ರವನ್ನೂ ಹತ್ತಿರದಿಂದ ನೋಡಿರುವ ವೇದವ್ಯಾಸರಿಗಿಂತ ಶಕ್ತ ವ್ಯಕ್ತಿ ಇನ್ನೊಬ್ಬರಿಲ್ಲ ಎಂದು ಅರಿತು ಅವರು ವೇದವ್ಯಾಸರ ಎದುರು ಪ್ರತ್ಯಕ್ಷರಾಗಿ ಕೃತಿ ರಚಿಸಲು ಕೇಳಿದರು.



ಅದಕೊಪ್ಪಿದ ವ್ಯಾಸರು ತನ್ನ ಸಹಾಯಕ್ಕೆ ಲಿಪಿಕಾರನ ಅಗತ್ಯವಿದೆ ಎಂದು ಹೇಳಿದರು. ಅದಕ್ಕೆ ಬ್ರಹ್ಮದೇವ ಈ ಕೆಲಸಕ್ಕೆ ಪ್ರಥಮ ಪೂಜಿತ ಗಣಪತಿಯೇ ಯೋಗ್ಯನೆಂದು ತಿಳಿಸಿದರು. ಆಗ ವ್ಯಾಸರು ತಮ್ಮ ಕೃತಿ ರಚನೆಯ ಕೆಲಸಕ್ಕೆ ನೆರವಾಗುವಂತೆ ಗಣಪತಿಯನ್ನು ಕೋರಿ ಮತ್ತೆ ತಪಸ್ಸಿಗೆ ಕುಳಿತರು. ಈ ತಪಸ್ಸಿಗೆ ಪ್ರಸನ್ನನಾದ ಗಣಪತಿ ವ್ಯಾಸರೆದುರು ಸಾಕ್ಷಾತ್ಕಾರಗೊಂಡು ತಪಸ್ಸಿನ ಕಾರಣ ಕೇಳಿದನು.

ಆಗ ವ್ಯಾಸರು ಬ್ರಹ್ಮದೇವರಿಂದ ನಿವೇದನೆಗೊಳಗಾದ ಕಾರ್ಯವನ್ನು ತಿಳಿಸಿ ಅದಕ್ಕೆ ಸಹಾಯ ಮಾಡುವಂತೆ ಕೋರಿದರು. ಇಂತಹ ಅದ್ಭುತ ಕೃತಿ ರಚಿಸುವ ಶಕ್ತಿ ವೇದವ್ಯಾಸರಿಗಿದೆ ಎಂದು ಗಣಪತಿಗೆ ತಿಳಿದಿದ್ದರೂ ಅವರನ್ನು ಪರೀಕ್ಷಿಸುವ ಸಲುವಾಗಿ ಆತ ಒಂದು ಷರತ್ತು ವಿಧಿಸಿ, ವ್ಯಾಸರು ಯಾವುದೇ ಕಾರಣಕ್ಕೂ ಕಥೆ ಹೇಳುವುದನ್ನು ಮಧ್ಯದಲ್ಲಿ ನಿಲ್ಲಿಸಬಾರದು. ಹಾಗೇನಾದರು ಮಾಡಿದರೆ ನಾನು ಆ ಕ್ಷಣವೇ ಬರೆಯುವುದನ್ನು ನಿಲ್ಲಿಸಿ ಮರಳುತ್ತೇನೆ ಮತ್ತು ನಾನೂ ಯಾವುದೇ ಕಾರಣಕ್ಕೂ ಬರೆಯುವುದನ್ನು ನಿಲ್ಲಿಸುವುದಿಲ್ಲವೆಂದು ಹೇಳಿದನು.

ವ್ಯಾಸರಿಗೆ ತಮ್ಮ ಶಕ್ತಿಯ ಅರಿವಿದ್ದರೂ ಗಣಪತಿಯ ವೇಗಕ್ಕೆ ಕಥೆ ಹೇಳಲು ಸಾಧ್ಯನಾ ಎಂಬ ಸಂಶಯ ಮೂಡಿ ಅದಕ್ಕೊಂದು ಉಪಾಯ ಹೂಡುತ್ತಾರೆ. ಅದರಂತೆ ಅವರು ಗಣಪತಿಗೆ, ನಾನು ಹೇಳುವ ಕಥೆಯನ್ನು ಅರ್ಥ ಮಾಡಿಕೊಳ್ಳದೇ ನೀನು ಬರೆಯುವಂತಿಲ್ಲ ಎಂದಾಗ ಆತ ಅದಕ್ಕೆ ಒಪ್ಪಿದನು. ಅದರಂತೆ ಒಂದು ಶುಭ ಮುಹೂರ್ತದಲ್ಲಿ ಮಹಾಭಾರತದ ಕೃತಿ ರಚಿಸಲು ಕುಳಿತ ಲಿಪಿಕಾರ ಗಣಪತಿ ವಂದಿಸಿ ವ್ಯಾಸರು ಕಥೆ ಹೇಳಲು ಶುರು ಮಾಡಿದರು.

ಅವರು ಹೇಳಿದ್ದನ್ನೆಲ್ಲ ಶ್ರದ್ಧೆಯಿಂದ ಕೇಳಿಸಿಕೊಂಡು ಗಣಪತಿ ಬರೆಯತೊಡಗಿದನು. ವ್ಯಾಸರು ತಮ್ಮ ಉಪಾಯದಂತೆ ತಮಗೆ ಕ್ಷಣಿಕ ವಿಶ್ರಾಂತಿ ಬೇಕೆನಿಸಿದಾಗ ಕ್ಲಿಷ್ಟಕರವಾಗಿರುವ ಮತ್ತು ಯೋಚನೆಗೆ ಒರೆ ಹಚ್ಚುವಂತಹ ವಾಕ್ಯಗಳನ್ನು ಹೇಳಿ ಅದನ್ನು ಗಣಪತಿ ಅರ್ಥೈಸಿಕೊಳ್ಳಲು ತೆಗೆದುಕೊಳ್ಳುವ ಸಮಯದಲ್ಲಿ ವಿಶ್ರಾಂತಿ ಪಡೆದು ಮತ್ತೆ ಕಥೆ ಹೇಳುವುದನ್ನು ಮುಂದುವರೆಸಿದರು. ಕೃತಿ ರಚಿಸುವ ಸಮಯದಲ್ಲೊಮ್ಮೆ ಗಣಪತಿಯ ಲೇಖನಿ ತುಂಡಾಗುತ್ತದೆ.

ಆಗ ಬರವಣಿಗೆಯನ್ನು ನಿಲ್ಲಿಸುವುದಿಲ್ಲ ಎಂಬ ಮಾತಿನಂತೆ ನಡೆದುಕೊಳ್ಳುವ ಸಲುವಾಗಿ ಗಣಪತಿ ತನ್ನ ದಂತವನ್ನೇ ಮುರಿದು ಕೃತಿ ರಚನೆಯನ್ನು ಮುಂದುವರೆಸಿದನು. ಹೀಗೆ ವರ್ಷಗಟ್ಟಲೇ ವ್ಯಾಸರು ಕಥೆ ಹೇಳುವುದು ಮತ್ತು ಗಣಪತಿ ಬರೆಯುವುದು ಮುಂದುವರೆದು ಶ್ರೇಷ್ಠ ಕೃತಿಯೊಂದು ರಚನೆಯಾಗುತ್ತದೆ. ★

# ಬದುಕಿನ ಅಮೂಲ್ಯ ಪಾಠ ಕಲಿಸಿಕೊಟ್ಟ ನಿಜ ಜೀವನದ ಎರಡು ಘಟನೆಗಳು

ಒಮ್ಮೆ ನಾವು ನಮ್ಮ ಸ್ವಾಮೀಜಿಯವರೊಂದಿಗೆ ದೆಹಲಿಯಿಂದ ಬೆಂಗಳೂರಿಗೆ ಪ್ರಯಾಣಿಸಬೇಕಿತ್ತು. ವಿಮಾನ ನಿಲ್ದಾಣಕ್ಕೆ ಬರುವಷ್ಟರಲ್ಲಿ ಧ್ವನಿವರ್ಧಕದಲ್ಲಿ 'ತಾಂತ್ರಿಕ ತೊಂದರೆಯೊಂದಾಗಿ ಬೆಂಗಳೂರಿನ ವಿಮಾನ ಮೂರು ಗಂಟೆ ತಡವಾಗಿ ಹೊರಡುತ್ತದೆ. ಪ್ರಯಾಣಿಕರಿಗಾಗುವ ಅನಾನುಕೂಲಕ್ಕೆ ವಿಷಾಧಿಸುತ್ತೇವೆ' ಎಂದು ಪ್ರಕಟಿಸುತ್ತಿದ್ದರು.

ಅಲ್ಲಿದ್ದ ಎಲ್ಲರೂ ಬೇಸರಗೊಂಡರು. ಸ್ವಾಮೀಜಿಯವರು ಏನೂ ಮಾತನಾಡದ ಗಂಭೀರವಾಗಿ ವಿಮಾನ ನಿಲ್ದಾಣದ ಮೂಲೆಯೊಂದರಲ್ಲಿ ಕುಳಿತರು. ತಮ್ಮ ಬ್ರೀಫ್ ಕೇಸ್‌ನಿಂದ ಪತ್ರಗಳನ್ನೂ, ತಮ್ಮ ಲೆಟರ್‌ಪ್ಯಾಡ್‌ನ್ನೂ ಹೊರತೆಗೆದರು. ಮೂರು ಗಂಟೆಗಳ ಕಾಲ ತಲೆಯೆತ್ತಿಯೂ ನೋಡಲಿಲ್ಲ. ಪತ್ರಗಳಿಗೆ ತಮ್ಮ ಕೈ ಬರಹದಲ್ಲಿಯೇ ಉತ್ತರಿಸಿದರು. ಪತ್ರಗಳಿಗೆಲ್ಲ ಉತ್ತರಿಸಿ ಅಲ್ಲಿದ್ದ ಅಂಚೆಪೆಟ್ಟಿಗೆಗೆ ಹಾಕಿ ಬರುವ ಹೊತ್ತಿಗೆ ಧ್ವನಿವರ್ಧಕಲ್ಲಿ 'ಇದೀಗ ವಿಮಾನ ಹೊರಡಲು ಸಿದ್ಧವಾಗಿದೆ' ಎಂದು ಪ್ರಕಟಿಸಿದರು.

ನಾವೆಲ್ಲ ವಿಮಾನದತ್ತ ಹೊರಡುತ್ತ ಭಾರತ ಸರಕಾರವನ್ನೂ, ಏರ್‌ಲೈನ್ಸ್‌ನ್ನೂ, ನಮ್ಮ ಅದೃಷ್ಟವನ್ನೂ ಬೈಯುತ್ತಾ ಹೋಗುತ್ತಿರುವಾಗ ಸ್ವಾಮಿಜಿಯವರು 'ತಾಂತ್ರಿಕ ತೊಂದರೆ ಸೃಷ್ಟಿಸಿ, ವಿಮಾನ ಹೊರಡುವುದನ್ನು ಮೂರು ಗಂಟೆಗಳ ಕಾಲ ತಡಮಾಡಿ. ನಾನು ಎಲ್ಲ ಪತ್ರಗಳಿಗೂ ಉತ್ತರಿಸುವಂತೆ ಮಾಡಿದ ಭಗವಂತನಿಗೆ ವಂದಿಸುತ್ತೇನೆ. ವಿಮಾನ ನೆಲದಲ್ಲಿದ್ದಾಗಲೇ ತಾಂತ್ರಿಕ ತೊಂದರೆ ಉಂಟಾಯಿತು. ಒಂದು ವೇಳೆ ಆಕಾಶದಲ್ಲಿದ್ದಾಗ ತೊಂದರೆಯಾಗಿದ್ದರೆ ಏನಾಗುತ್ತಿತ್ತು? ಮೂರು ಗಂಟೆ ಲೇಟ್ ಆಗಿ ಬೆಂಗಳೂರು ತಲುಪಿ ಸ್ವಾಮೀಜಿ ಲೇಟ್ ಆಗುವ ಬದಲು ಲೇಟ್ ಸ್ವಾಮೀಜಿ ಆಗುತ್ತಿದ್ದೆ! ಅದನ್ನು ತಪ್ಪಿಸಿದ್ದಕ್ಕಾಗಿ ಭಗವಂತನಿಗೆ ಧನ್ಯವಾದಗಳನ್ನು ಹೇಳಬೇಕು' ಎಂದರು.

ಎರಡನೇ ಘಟನೆ: ಒಮ್ಮೆ ನಮ್ಮ ಪೂಜ್ಯ ತಂದೆಯವರೊಟ್ಟಿಗೆ ಆಸ್ಪತ್ರೆಗೆ ಹೋಗಿದ್ದೆವು. ಜನಸಂದಣಿ ಬಹಳ ಇತ್ತು. ಅಲ್ಲಿದ್ದದ್ದು ಒಂದೇ ಲಿಫ್ಟ್‌ನ ಗಿಂಡಿಯನ್ನು ಪದೇ ಪದೇ ಒತ್ತುತ್ತಿದೆವು. ಅದನ್ನು ಗಮನಿಸಿದ ನಮ್ಮ ತಂದೆಯವರು 'ಲಿಫ್ಟ್ ಬೇಗ ಬರುತ್ತದೆಯೇ? ಅದರ ವೇಗ ಹೆಚ್ಚಾಗುತ್ತದೆಯೇ?' ಎಂದು ಪ್ರಶ್ನಿಸಿದರು ನಮ್ಮಲ್ಲಿ ಅದಕ್ಕೆ ಉತ್ತರವಿರಲಿಲ್ಲ.

ಆದರೆ ನಾವಿ ಬಟನ್ ಒತ್ತುವುದನ್ನು ಬಿಡಲಿಲ್ಲ. ಲಿಫ್ಟ್ ಬರಲಿಲ್ಲ ಸ್ವಲ್ಪ ಹೊತ್ತಿಗೆ ಮೇಲಂತಸ್ತಿನಿಂದ ಮೆಟ್ಟಿಲು ಮೂಲಕ ಇಳಿದು ಬಂದ ಲಿಫ್ಟ್ ಚಾಲಕ 'ಲಿಫ್ಟಿನ ಬಟನ್ ಒತ್ತಿ ಒತ್ತಿ ಶಾರ್ಟ್ ಸರ್ಕ್ಯೂಟ್ ಆಗಿದೆ. ಮೆಕಾನಿಕ್ ಬರುವವರೆಗೂ ಲಿಫ್ಟ್



ನರ್ಮತಾ ಬಿ ಸಿ
ಶಿಕ್ಷಕರು, ಶಿವಮೊಗ್ಗ.

ಬರುವುದಿಲ್ಲ.' ಎಂದು ಹೇಳಿ ಹೋದ. ನಮಗೆ ಮುಖವೆತ್ತಿ ನಮ್ಮ ತಂದೆಯವರನ್ನು ನೋಡುವ ಧೈರ್ಯವಿರಲಿಲ್ಲ. ನಮ್ಮ ನಿತ್ಯ ಜೀವನದಲ್ಲಿ ಸಣ್ಣ–ಪುಟ್ಟ ಅಡೆತಡೆಗಳು ಉಂಟಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

ಬಸ್ಸು, ರೈಲು, ವಿಮಾನ, ಲಿಫ್ಟ್ ಅಥವಾ ನಾವು ಕಾಯುತ್ತಿರುವ ವ್ಯಕ್ತಿ ತಡವಾಗಿ ಬರಬಹುದು. ಅಂಥ ಸಂದರ್ಭಗಳಲ್ಲಿ ಮುಷ್ಠಿಬಿಗಿ ಹಿಡಿದರೆ, ಅವುಡುಗಚ್ಚಿದರೆ ಅಥವಾ ಎಲ್ಲರ ಮೇಲೆ ಸಿಟ್ಟು ಮಾಡಕೊಂಡರೆ ಏನೂ ಅಸಹನೆ ಇನ್ನಷ್ಟೂ ಹೆಚ್ಚಾಗುತ್ತದೆಯೇ ಹೊರತು ತಡವಾಗಿರುವುದು ಬೇಗ ಬರುವುದಿಲ್ಲ. ಇಂತ ಸಂದರ್ಭಗಳನ್ನು ಅಡೆತಡೆಗಳು ಎಂದು ಭಾವಿಸಿ ದೋಷಿಸುವ ಬದಲು ಅವುಗಳನ್ನು ಅವಕಾಶಗಳೆಂದು ಭಾವಿಸಿ ಸದುಪಯೋಗ ಪಡಿಸಿಕೊಳ್ಳಬಹುದು.

ನೇರ ಬಳಕೆ ಸಾಧ್ಯವಿಲ್ಲದಿದ್ರೆ ಅಲ್ಲಿಯೇ ಏನನ್ನಾದರೂ, ಕಣ್ಮುಚ್ಚಿ ಕುಳಿತು ಧ್ಯಾನ ಮಾಡಬಹುದು. ಕುಳಿತಲ್ಲಿಯೇ ಪ್ರಾಣಾಯಾಮ ಮಾಡಬಹುದು ಅಥವಾ ಯಾವುದಾದರೂ ಉಲ್ಲಾಸ ತರುವ ಪ್ರಸಂಗವನ್ನು ನೆನಪಿಸಿಕೊಂಡು ಪುಳಕಿತರಾಗಬಹುದು. ಇದಕ್ಕೆ ಕಠಿಣ ಸಾಧನೆಯೂ ಬೇಕಿಲ್ಲ. ಕಾಸು ಖರ್ಚು ಮಾಡಬೇಕಿಲ್ಲ. ಅಲ್ಲವೇ? ★

# ನಮ್ಮ ಸಂಕಲ್ಪ ನಮಗೇ ತಿಳಿದಿರುವುದು ಅಲ್ಪ

ಇಪ್ಪತ್ತು ವರ್ಷಗಳ ಹಿಂದೆ ಇಷ್ಟೊಂದು ಜನ ದೇವಸ್ಥಾನಕ್ಕೆ ಹೋಗುವುದನ್ನು ನೀವು ನೋಡಿರಲು ಸಾಧ್ಯವಿಲ್ಲ ಈಗ ಯಾವ ದೇವಸ್ಥಾನಕ್ಕೆ ಹೋದರು ವಿಪರೀತ ಜನ. ಎಲ್ಲರಿಗೂ ಆದಷ್ಟು ಬೇಗ ದರ್ಶನ ಮಾಡಿ ಹೊರಡುವ ತವಕ. ದೇವಸ್ಥಾನದಲ್ಲಿ ಕಳೆಯುವ ಸಮಯ ಅರ್ಧ ಗಂಟೆಯಾದರೆ , ಸುತ್ತಮುತ್ತಲ ಅಂಗಡಿ ಮುಂಗಟ್ಟುಗಳಲ್ಲಿ ಕಳೆಯುವ ಸಮಯ ಅದರ ಐದು ಪಟ್ಟು. ಹೋಟಲ್ ಗಳಲ್ಲಿ ತಿನ್ನುವ ಸಮಯ ಇನ್ನೂ ಹೆಚ್ಚು. ದೇವಸ್ಥಾನಕ್ಕೆ ತಲುಪುವ ಹಾದಿಯ ಸಮಯ ಅದಕ್ಕಿಂತಲೂ ಹೆಚ್ಚು.

ತೀರ್ಥಕ್ಷೇತ್ರಕ್ಕೆ ಹೋಗುತ್ತಿದ್ದೇವೆ ಎಂದರೆ, ಖರ್ಚಿನ ಬಾಬತ್ತು ಅಧಿಕ. ವಾಹನ ಖರ್ಚು, ಹೋಟೆಲ್‌ನಲ್ಲಿ ಉಳಿಯುವ ಖರ್ಚು, ಸುತ್ತಮುತ್ತ ಖರೀದಿ ಮಾಡುವ ಖರ್ಚುಗಳನ್ನೂ ಒಟ್ಟುಗೂಡಿಸಿದರೆ ದೇವಸ್ಥಾನಕ್ಕೆ ಅಂತ ಹಾಕುವ ದುಡ್ಡು ಅತ್ಯಂತ ಕಡಿಮೆ. ಇನ್ನೊಂದು ಅತ್ಯಂತ ರೋಚಕ ಸಂಗತಿ ಎಂದರೆ, ಪೂಜಾ ಸಮಯದಲ್ಲಿ ನಮ್ಮ ಮನಸ್ಸು ಮಂಗಳಾರತಿಗೆ ಎಷ್ಟು ದುಡ್ಡು ಹಾಕೋಣ ಎನ್ನುವ ಕಡೆಗೆ. ಚಿಲ್ಲರೆಯನ್ನೋ ಅಥವಾ ನೋಟವನ್ನೋ ಹುಡುಕುವ ಹೊತ್ತಿಗೆ ಮಂಗಳಾರತಿ ನಮ್ಮ ಹತ್ತಿರಕ್ಕೆ ಬಂದಿರುತ್ತದೆ. ಅಂತೂ ಮಂಗಳಾರತಿ ತೆಗೆದುಕೊಂಡು ತಕ್ಷಣ ಜಾಗ ಖಾಲಿ ಮಾಡಿಬಿಡುತ್ತೇವೆ.



ಮುರಳಿ ಎಸ್

ಒಮ್ಮೆ ಯೋಚಿಸಿ, ದೇವರ ಸನ್ನಿಧಿಗೆ ತೆರಳಿದ ಉದ್ದೇಶ ಯಾವ್ಯಾವುದೋ ಯೋಚನೆಯಲ್ಲೇ ಕಳೆದುಹೋಗುತ್ತದೆ. ಸರತಿ ಸಾಲಿನಲ್ಲಿ ಸಣ್ಣಪುಟ್ಟ ತಿಕ್ಕಾಟ, ದೇವರ ಹತ್ತಿರ ಹೋದಾಗ ತಳ್ಳುವುದು, ನಮ್ಮವರು ಎಲ್ಲಿದ್ದಾರೆಂಬ ಯೋಚನೆ, ಅರ್ಚಕರ ಸಿಡುಕು ಇವೆಲ್ಲವೂ ಅತ್ಯಂತ ಸಾಮಾನ್ಯ.

ಇನೋಂದು ಪೇಚನ ಪ್ರಸಂಗ ಎಲ್ಲರಿಗೂ ಎದುರಾಗುತ್ತದೆ. ಸಂಕಲ್ಪ ಚೀಟಿ ಬರೆಸಿ, ಅರ್ಚಕರ ಹತ್ತಿರ ಕೊಟ್ಟಾಗ ಅವರು ನಿಮ್ಮ ಹೆಸರು, ನಕ್ಷತ್ರ, ರಾಶಿ, ಕುಲ, ಗೋತ್ರವನ್ನು ಕೇಳುತ್ತಾರೆ. ಬಹಳ ಜನರಿಗೆ ಅಲ್ಲಿ ಅದು ಜ್ಞಾಪಕಕ್ಕೆ ಬರುವುದೇ ಇಲ್ಲ. ಪ್ರತಿ ಬಾರಿಯೂ ನಿಮ್ಮ ಜತೆ ಬಂದ ಹೆಂಡತಿನೋ ಅಮ್ಮನೋ ಅಕ್ಕನೋ ಅದಕ್ಕಾಗಿ ಸಹಾಯ ಮಾಡಬೇಕು.

ಅಂತೂ ಅರ್ಚಕರು ನಿಮ್ಮ ಮನೆಯವರೆಲ್ಲರ ಹೆಸರು , ನಕ್ಷತ್ರ, ರಾಶಿಯನ್ನು ಕೇಳಿ, ವಿಗ್ರಹದ ಹತ್ತಿರ ಹೋಗಿ ಮಂತ್ರ ಹೇಳುತ್ತಾರೆ. ಆಗಂತೂ ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ಯಾರೂ ಗಮನಿಸುವುದಿಲ್ಲ (ಮಂಗಳಾರತಿಗೆ ಎಷ್ಟು ದುಡ್ಡು ಹಾಕೋದು ಎನ್ನುವುದನ್ನೇ ಯೋಚನೆ ಮಾಡ್ತಾ ಇರ್ತಿವಿ). ಈ ಅಂಕಣದ ಉದ್ದೇಶವೇ ದೇವಸ್ಥಾನದಲ್ಲಿ ಅರ್ಚಕರು ನಿಮ್ಮ ಹೆಸರು, ನಕ್ಷತ್ರ ಕೇಳಿದ ಮೇಲೆ ಹೇಳುವ ಸಂಕ್ಪಲ ಮಂತ್ರದ ವಿವರಣೆ ಮತ್ತು ಅದರ ಹಿಂದೆ ಇರುವ ವೈಜ್ಞಾನಿಕ ಹಿನ್ನೆಲೆಯ ಕುರಿತು.

ಏನೋ ತೀರ್ಮಾನ ಮಾಡುತ್ತಿದ್ದೇವೆ, ಅದಕ್ಕೆ ದೇವರಲ್ಲಿ ಕೋರುವ ಅನುಮತಿಯೇ ಸಂಕಲ್ಪ. ಬಂದಿರುವವರು ಯಾರು ಎಂದು(ನಿಮ್ಮ ಅಡ್ರೆಸ್) ದೇವರಿಗೆ ಹೇಳಬೇಕಲ್ಲವೇ? ಅರ್ಚಕರ ಮೂಲಕ ದೇವರಿಗೆ ಅದರ ಸಂದೇಶ ಕಳಿಸುತ್ತಿದ್ದೀರಿ. ಡಾಕ್ಟರ್ ಹತ್ತಿರ ಹೋದರೆ ಅವರಿಗೆ ನೀವು ಯಾರು, ಎಷ್ಟು ವಯಸ್ಸು, ಏನು ತೊಂದರೆ, ಏನು ಮಾಡಬೇಕು ಎಂದೆಲ್ಲ ಕೇಳುವುದಿಲ್ಲವೇ? ಹಾಗೇನೇ, ನಾನು ಇಂಥವನು, ಇಂತಹ ಕಾರ್ಯವೊಂದನ್ನು ಆಶಿಸಿರುವೆ, ಅದರ ತೀರ್ಮಾನಕ್ಕೆ ನೀನು ಅನಿಮತಿ ಕೊಡು ಎಂದು ದೇವಸ್ಥಾನಕ್ಕೆ ಹೋದವರು ಸಂಕಲ್ಪದ ಮೂಲಕ ಕೇಳುತ್ತಾರೆ. ಮೊದಲು ನಿಮ್ಮ ಹೆಸರು, ರಾಶಿ, ಗೋತ್ರ, ಕುಲ ಹೇಳಿ, ಇಂಥವರು ಬಂದು ಕೋರುತ್ತಿದ್ದಾರೆ ಎಂದು ದೇವರಿಗೆ ತಿಳಿಸುವುದು. ಜತೆಗೆ, ಯಾವತ್ತು ಮತ್ತು ಎಲ್ಲಿ ಎನ್ನುವುದರ ಸ್ಥೂಲ ವಿವರ ಕೊಡುವುದೇ ಸಂಕಲ್ಪ. ಬನ್ನಿ, ಯಾವತ್ತು ಮತ್ತು ಎಲ್ಲಿ ಎನ್ನುವುದನ್ನು ತಿಳಿಸುವ ಮಂತ್ರ ನೋಡೋಣ. **ಶುಭೇ ಶೋಭನೇ ಮುಹೂರ್ತೇ ಆದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ ಶ್ವೇತ ವರಾಹ ಕಲ್ಪೇ ವೈವಸ್ವತ ಮನ್ವಂತರೇ ಅಷ್ಟಾವಿಂಶತಿತಮೇ ಕಲಿಯುಗೇ ಪ್ರಥಮ ಪಾದೇ ಜಂಬೂ ದ್ವೀಪೇ ಭರತವರ್ಷೇ ಭರತಖಂಡೇ ಗೋದಾವರ್ಯಾಃ ದಕ್ಷಿಣೇ ತೀರೇ ಶಾಲೇವಾಹನಶಖೇ ಬೌದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ವಾವಹಾರಿಕೇ ಚಾಂದ್ರಮಾನೇ ಪ್ರಭವಾದಿ ಷಷ್ಟಿ ಸಂವತ್ಸರಾಣಾಂ ಮಧ್ಯೇ ನಾಮ ಸಂವತ್ಸರೇ, ಉತ್ತರಾಯನೇ / ದಕ್ಷಿಣಾಯನೇ ಋತೌ ಮಾಸೇ, ಶುಕ್ಲ / ಕೃಷ್ಣ ಪಕ್ಷೇ ತಿಥಿಯಾಂ ವಾಸರ ಯುಕ್ತಾಯಾಂ, ಶುಭ ನಕ್ಷತ್ರ, ಶುಭಯೋಗ ಶುಭ ಕರಣ ಏವಂ**

11ನೇ ಪುಟಕ್ಕೆ...

# ವಾಸದೇವ ಹಾಗೂ ದೇವಕಿ ಪೂರ್ವ ಜನ್ಮದ ಕರ್ಮದ ಫಲದ ಕಥೆ

ವಸುದೇವ-ದೇವಕಿ..."

ಕೃಷ್ಣನ ತಂದೆ ತಾಯಿಯರು ವಸುದೇವ ದೇವಕಿ ಜಗದೊಡೆಯನಾದ ಪರಮಾತ್ಮನ ತಂದೆ ತಾಯಿಯಾದರೂ. ಮನೆವಾಸ ಅನುಭವಿಸಿದರು. ಹುಟ್ಟಿದ ಮಕ್ಕಳನ್ನೆಲ್ಲ ಕಳೆದುಕೊಂಡು ಸಂಕಟ ಅನುಭವಿಸಿದರು. ಭಗವಂತ ಶ್ರೀ ಕೃಷ್ಣನೇ ಹುಟ್ಟಿದ ಕ್ಷಣವೇ ಹೆತ್ತ ಕಂದನನ್ನ ಗೋಕುಲದಲ್ಲಿ ಬಿಟ್ಟು ಮಗುವನ್ನ ಎತ್ತಿ ಆಡಿಸುವ ಸೌಭಾಗ್ಯ ಅವರಿಗೆ ಇಲ್ಲವಾಯಿತು. ಹೀಗೆಲ್ಲಾ ಆಗಲು ಕಾರಣ ಅವರ ಪೂರ್ವ ಜನ್ಮದ ಕರ್ಮಫಲ.

ವಸುದೇವ ಮತ್ತು ದೇವಕಿ ಪೂರ್ವ ಜನ್ಮದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾದ ಕಶ್ಯಪ ಮಹರ್ಷಿ ಮತ್ತು ಅದಿತಿಯರಾಗಿದ್ದರು. ಇವರ ಮಕ್ಕಳು ವರುಣ ಮತ್ತು ಗರುಡ. ವರುಣನು ಸೂರ್ಯನಿಗೆ ಸಾರಥಿಯಾಗಿದ್ದನು ಹಾಗು ಬ್ರಹ್ಮನ ಅಷ್ಟದಿಕ್ಪಾಲಕರಲ್ಲಿ ಒಬ್ಬರಾದ ಸಮುದ್ರದ ದೇವತೆಯೂ ಆಗಿದ್ದನು. ಒಮ್ಮೆ ಮಗನನ್ನ ನೋಡಬೇಕೆಂದು ಆಸೆಯಾಗಿ ಮರುಣನ ಮನೆಗೆ ಬಂದರು. ಅಮ್ಮನ ಮನೆಯಲ್ಲಿ ಬೇಕಾದಷ್ಟು ಹಸುಗಳಿದ್ದು ಅವು ಅಮೃತದಷ್ಟೇ ಸಿಹಿಯಾದ ಹಾಲನ್ನು ಯಥೇಚ್ಛವಾಗಿ ಕೊಡುತ್ತಿದ್ದವು. ಅವುಗಳನ್ನು ಬ್ರಹ್ಮನು ವರುಣನಿಗೆ ಕೊಟ್ಟಿದ್ದನು. ಇದೆಲ್ಲ ತಿಳಿಯದ ಅದಿತಿ ಅಲ್ಲಿರುವ ಗೋ ಸಂಪತ್ತನ್ನು ನೋಡಿ ಮುದ್ದಾದ ಹಸುಗಳ ಮೇಲೆ ಆಸೆಯಾಯಿತು. ಅವಳು ಕಶ್ಯಪರಿಗೆ ಹೇಳಿದಳು ನಾವು ಈ ಹಸುಗಳನ್ನು ನಮ್ಮ ಮನೆಗೆ ತೆಗೆದುಕೊಂಡು ಹೋಗೋಣ ಎಂದು ಕೇಳಿದಾಗ ಅದಿತಿ ಹೇಳಿದಳು ಇವುಗಳಷ್ಟು ಲಕ್ಷಣವಾದ ಅಮೃತದಂಥ ಹಾಲು ಕೊಡುವ ಹಸುಗಳನ್ನು ನಾನು ನೋಡೇ ಇರಲಿಲ್ಲ. ವರುಣ ಏನು ಬೇರೆ ಅಲ್ಲ ನಮ್ಮ ಸ್ವಂತ ಮಗ ಆದುದರಿಂದ ಕೇಳುವುದು ಬೇಡ ಹಸುಗಳನ್ನು ತೆಗೆದುಕೊಂಡು ಹೋಗೋಣ ಎಂದಳು. ಕಶ್ಯಪರಿಗೊ ಅದೂ ಸರಿ ಎನಿಸಿತು.

ಒಂದು ದಿನ ವರುಣ ಮನೆಯಲ್ಲಿ ಇರಲಿಲ್ಲ. ಅದೇ ದಿನವೇ ಕಶ್ಯಪ ಮತ್ತು ಅದಿತಿಯರು ಅವನ ಮನೆಯಲ್ಲಿದ್ದ ಹಸುಗಳನ್ನೆಲ್ಲ ತೆಗೆದೂಕೊಂಡು ತಮ್ಮ ಆಶ್ರಮಕ್ಕೆ ಬಂದರು.

ಇತ್ತ ವರುಣ ಮನೆಗೆ ಬಂದು ನೋಡುತ್ತಾನೆ





ಮಂಜುಳ ದೇವಿ
ಬೆಂಗಳೂರು

ಗೋವುಗಳು ಇಲ್ಲದಿರುವದನ್ನು ಕಂಡು ಅವನಿಗೆ ಬೇಸರವಾಗುತ್ತದೆ. ಮತ್ತು ತನ್ನ ತಂದೆ- ತಾಯಿಯರೇ ಅವುಗಳನ್ನು ತೆಗೆದುಕೊಂಡು ಹೋದರೆಂದು ಅವನಿಗೆ ತಿಳಿಯುತ್ತದೆ. ತಂದೆಯ ಹತ್ತಿರ ಬಂದು, ತಂದೆಯೇ ನನ್ನ ಮನೆಯಲ್ಲಿದ್ದ ವಿಶೇಷವಾದ ಗೋ ಸಂಪತ್ತು ನನ್ನದಲ್ಲ ನನಗೆ ಬ್ರಹ್ಮ ದೇವರು ಕೊಟ್ಟಿದ್ದು ಅವುಗಳು ಇಲ್ಲದೆ ಹೋದರೆ ನನ್ನ ಯಜ್ಞ -ಯಾಗಗಳನ್ನು ಮಾಡಲು ಆಗುವುದಿಲ್ಲ ಅವುಗಳನ್ನು ಕೊಟ್ಟು ಬಿಡಿ ಎಂದು ನಮ್ರತೆಯಿಂದ ಕೇಳಿದನು. ಆದರೆ ಆ ಸುಂದರವಾದ ಗೋ ಸಂಪತ್ತಿನ ಮೋಹಕ್ಕೆ ಒಳಗಾಗಿದ್ದ ಕಶ್ಯಪ ಮುನಿಗಳು ಅವುಗಳನ್ನು ಹಿಂತಿರುಗಿಸಲು ಒಪ್ಪಲಿಲ್ಲ. ವರುಣನು ಇಕ್ಕಟ್ಟಿಗೆ ಸಿಲುಕಿಕೊಂಡು ತಂದೆಯೊಡನೆ ಹಠ ಮಾಡಿ ವಾದಿಸುವುದು ಸಾಧ್ಯವಿಲ್ಲ.

ಅವನು ಮಾಡಬೇಕಾದ ಧಾರ್ಮಿಕ ಕಾರ್ಯಗಳನ್ನು ನಿಲ್ಲಿಸುವಂತೆಯೂ ಇಲ್ಲ. ಏನು ಮಾಡುವುದೆಂದು ದಾರಿ ಕಾಣದೆ ಬ್ರಹ್ಮ ದೇವರ ಬಳಿ ಹೋಗಿ ಎಲ್ಲವನ್ನು ಹೇಳಿದ.

ಬ್ರಹ್ಮನು ಕಶ್ಯಪರನ್ನು ಕರೆಸಿ ನಿನ್ನಂತ ಋಷಿಮುನಿಗಳಿಗೆ ಇದು ಯೋಗ್ಯವಾದ ಕೆಲಸವಲ್ಲ ನೀನು ಮಾಡಿದ್ದು ತಪ್ಪು. ಯೋಗ್ಯನಾದ ಋಷಿಯಾಗಿರದ ಕಾರಣ ನಿನ್ನನ್ನು ಕ್ಷಮಿಸಲು ಸಾಧ್ಯವಿಲ್ಲ. ಆದ್ದರಿಂದ ★

ನೀನು ಭೂಲೋಕದಲ್ಲಿ ಜನಿಸಿ ಕಣ್ಣೆದುರಿಗೆ ಆಗುವ ಅನ್ಯಾಯಗಳನ್ನೆಲ್ಲ ನೋಡಿ ಏನು ಮಾಡಲಾಗದ ಅಸಹಾಯಕನಾಗಿ ಒದ್ದಾಡುವಂತಾಗು ಎಂದು ಶಾಪ ಕೊಟ್ಟನು. ಆಗ ಕಶ್ಯಪರಿಗೆ ತಮ್ಮ ತಪ್ಪಿನ ಅರಿವಾಗಿ ತಾನು ಮಾಡಿದ್ದು ತಪ್ಪು ಎಂದು ಅರ್ಥವಾಗಿ, ಶಾಪ ವಿಮೋಚನೆಗಾಗಿ ಭಗವಂತನನ್ನು ಧ್ಯಾನ ಮಾಡಿದರು.

ಅವರು ಪ್ರಾರ್ಥನೆಗೆ ಒಲಿದ ಭಗವಂತನು ಪ್ರತ್ಯಕ್ಷನಾಗಿ, ದಂಪತಿಗಳಾದ ನೀವಿಬ್ಬರೂ ಸೇರಿ ತಪ್ಪು ಮಾಡಿದ್ದೀರಿ ಕರ್ಮ ಫಲವನ್ನು ಅನುಭವಿಸಲೇಬೇಕು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಆದರೆ ನೀನು ತಪಸ್ವಿಯಾದ ಕಾರಣ ಭೂಲೋಕದಲ್ಲಿ ನೀನು ಜನಿಸಿದಾಗ, ಮುಂದೆ ದ್ವಾಪರದ ಶ್ರೀ ಕೃಷ್ಣನ ಅವತಾರದಲ್ಲಿ ನಿಮ್ಮ ಮಗನಾಗಿ ನಾನೇ ಜನಿಸಿ ನಿಮ್ಮನ್ನು ಬಂಧನದಿಂದ ಬಿಡುಗಡೆ ಮಾಡುತ್ತೇನೆ ಎಂದು ವರ ಕೊಟ್ಟನು. ಈ ವರದಿಂದಾಗಿ ಕಶ್ಯಪ ಅದಿತಿಯರ ಮಗನಾಗಿ ಶ್ರೀ ಕೃಷ್ಣ ಜನಿಸಿದನು. ವಸುದೇವ ದೇವಕಿಯರು ತಮ್ಮ ಕರ್ಮಫಲ ಕಳೆದುಕೊಳ್ಳುವುದಕ್ಕಾಗಿ ದುಷ್ಟ ಕಂಸನ ಕಾರಣದಿಂದ ಸೆರೆಯಲ್ಲಿದ್ದು ನಡೆಯುತ್ತಿದ್ದ ತಪ್ಪುಗಳನ್ನೆಲ್ಲ ಕಣ್ಣಿಂದ ನೋಡುತ್ತಾ ಏನು ಮಾಡಲಾಗದ ಕರುಳು ಕಿತ್ತು ಬರುವಂತಹ ಕಷ್ಟಗಳನ್ನು ಸಹಿಸಿಕೊಳ್ಳಬೇಕಾಯಿತು.

ಸಂಬಂಧಿಗಳೇ ಆಗಲಿ ಹೆತ್ತ ಮಕ್ಕಳೇ ಆಗಿರಲಿ ಇನ್ನೊಬ್ಬರ ಸಂಪತ್ತನ್ನು ಅಪಹರಿಸಿದರೆ ಅದರ ಕರ್ಮಫಲವನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ಆದೌ ದೇವಿಕಿ ದೇವಿ ಗರ್ಭ ಜನನಂ ಗೋಪಿ ಗೃಹೇ ವರ್ಧನಂ

ಮಾಯಾ ಪೂತನಿ ಜೀವಿತಾಪಹಣಂ!

ಗೋವರ್ಧನೋದ್ಧಾರಣಂ ಕಂಸಚ್ಛೇದನ ಕೌರವಾದಿಹನನಂ

ಕುಂತೀಸುತಾಂಪಾಲನಂ ಏತದ್ಭಾಗವತಂ

ಪುರಾಣ ಕಥಿತಂ ಶ್ರೀ ಕೃಷ್ಣ ಲೀಲಾಮೃತಂ!! ★

# ನಮ್ಮ ಸಂಕಲ್ಪ ನಮಗೇ ತಿಳಿದಿರುವುದು ಅಲ್ಪ

...9ನೇ ಪುಟದಿಂದ **ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ, ಅಸ್ಮಾಕಂ ಸಹಕುಟುಂಬಾನಾಂ ಕ್ಷೇಮಸ್ಥೈರ್ಯ ವಿಜಯವೀರ್ಯ ಅಭಯ ಆಯುರಾರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ ಶ್ರೀ(ದೇವರ ಹೆಸರು) ಪ್ರೀತ್ಯರ್ಥ್ಯಂ ಯಾವಚ್ಛಕ್ತಿ ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾಂ ಕರಿಷ್ಯೇ.** ಯಾವತ್ತು ಮತ್ತು ಎಲ್ಲಿ ಎನ್ನುವುದಕ್ಕೆ ಪ್ರಾರಂಭ ವಾಗುವುದು ಬ್ರಹ್ಮನ ಹುಟ್ಟಿನಿಂದ. ಬ್ರಹ್ಮನಿಗೆ ಈಗ ಐವತ್ತು ವರ್ಷಹಳಾಗಿದ್ದು (ಆದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ) ಐವತ್ತೊಂದನೇ ವರ್ಷದ ಮೊದಲನೇ ದಿವಸದಲ್ಲಿ ಇದ್ದಾನೆ. ಬ್ರಹ್ಮನ ಒಂದು ಹಗಲು ಎಂದರೆ ನಮ್ಮ 4,320,000,000 ವರ್ಷಗಳು. ಬ್ರಹ್ಮನ ಈ ಹಗಲಿನ ಹೆಸರು ಶ್ವೇತವರಾಹ ಕಲ್ಪೇ (ಬ್ರಹ್ಮನ ಒಂದು ಹಗಲು ಅಥವಾ ರಾತ್ರಿಗೆ ಕಲ್ಪ ಎನ್ನುತ್ತಾರೆ). ಈ ದಿವಸದಲ್ಲಿ ನಾವೀಗ ಏಳನೇ ಮನ್ವಂತರದಲ್ಲಿ ಇದ್ದೇವೆ, ಅದರ ಹೆಸರು (ವೈವಸ್ವತ). ಒಂದು ಮನ್ವಂತರ ಎಂದರೆ 311,040,000 ವರ್ಷಗಳು. ಈ ಮನ್ವಂತರದ 28ನೇ ಕಲಿಯುಗ ಇದು (ಅಷ್ಟಾವಿಂಶತಿತಮೇ ಕಲಿಯುಗೇ). ಅದರಲ್ಲಿ ಪ್ರಥಮ ಪಾದದಲ್ಲಿ ಇದ್ದೇವೆ. ಜಂಬೋ ದ್ವೀಪೇ ಭರತವರ್ಷೇ ಭರತಖಂಡೇ ಗೋದಾವರ್ಯಾಃ ದಕ್ಷಿಣೇ ತೀರೇ ಶಾಲಿವಾಹನಶಖೇ ಬೌದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ಎಂದರೆ, ಈ ದೇವಸ್ಥಾನ ಇರುವ ಸ್ಥಳ. ನಮ್ಮ ಅಖಂಡ ಭಾರತಕ್ಕೆ ಜಂಬೂ ದ್ವೀಪ ಎಂದು ಹೆಸರು ಗೋದಾವರಿ ತೀರದಲ್ಲಿ ದಕ್ಷಿಣ ಭಾಗದಲ್ಲಿರುವ ರಾಮಕ್ಷೇತ್ರದಲ್ಲಿ ಈಗ ನವಿದ್ದೇವೆ ಎಂದು. ಇದೇ ದೇವಸ್ಥಾನ ಅಮೆರಿಕದಲ್ಲಿ ಇದ್ದರೆ ಕ್ರೌಂಚ ದ್ವೀಪೇ, ಉತ್ತರ ಅಮೆರಿಕ ಖಂಡೆ, ಪಂಚ ಮಹಾಸರೋವರ ಸಮೀಪೆ, ಕ್ಯಾಲಿಫೋರ್ನಿಯಾ ರಾಜ್ಯೇ, ಲಾಸ್ ಏಂಜಲೀಸ್ ನಾಮ ಕಲ್ಯಾಣ ನಗರೇ ಎಂದು ಹೇಳಬೇಕು. ವರ್ತಮಾನ ವಿಸ್ವವಸು ಹೆಸರಿನ ಸಂವತ್ಸರದಲ್ಲಿ ಇದ್ದೇವೆ ಉತ್ತರಾಯಣ ಅಥಾವ ದಕ್ಷಿಣಾಯಣ, ಯಾವ ಋತು, ಯಾವ ಮಾಸ, ಯಾವ ಪಕ್ಷ ಕೃಷ್ಣ ಪಕ್ಷ ಅಥವಾ ಶುಕ್ಲ ಪಕ್ಷ, ಯಾವ ತಿಥಿ, ಯಾವ ನಕ್ಷತ್ರ, ಯಾವ ಘಳಿಗೆ ಎಂದೆಲ್ಲ ಸರಿಯಾಗಿ ಹೇಳಿ ಇಂಥವರು ಇಂಥ ದಿವಸ , ಇಂಥ ಕಡೆ ಈ ದೇವರಿಗೆ ಕೋರಿಕೊಳ್ಳುತ್ತಿದ್ದಾರೆ ನೋಡಿ, ನಮ್ಮವರು ಎಷ್ಟೊಂದು ಕರಾರುವಕ್ಕಾಗಿ ನಮ್ಮ ಅಸ್ತಿತ್ವವನ್ನು ಬ್ರಹ್ಮನ ಹುಟ್ಟಿನಿಂದ ಉಲ್ಲೇಖಿಸಿ ಹೇಳುತ್ತಿದ್ದರೆಂದು ಬೇರೆ ಯಾವುದೇ ಧರ್ಮದಲ್ಲಿ ಇಷ್ಟೊಂದು ವಿವರವಾಗಿ ಕಾಲ ಮತ್ತು ದೇಶ ಗಣನೆಯ ಪರಿಪಾಠವೇ ಇಲ್ಲ. ನೀವು ಮುಂದಿನ ಬಾರಿ ದೇವಸ್ಥಾನಕ್ಕೆ ಹೋದಾಹ ಅರ್ಚನೆ ಚೀಟಿ ಪಡೆದು, ಅರ್ಚಕರು ಮಂತ್ರ ಹೇಳುವುದನ್ನು ಆಲಿಸಿ, ನಮ್ಮ ಸನಾತನ ಧರ್ಮದ ಬಗ್ಗೆ ಹೆಮ್ಮೆಪಡಿ. ★

# ನಾಗರ ಪಂಚಮಿ 4 ಸರ್ಪಯಾಗ

ಪರೀಕ್ಷಿತನ ಮರಣಾನಂತರ ಆತನ ಮಗ ಜನಮೇಜಯನು ಪಟ್ಟವೇರುತ್ತಾನೆ ಜನಮೇಜಯನು ಭರತ ಖಂಡವನ್ನು ಆಳಿದ ದ್ವಾಪರಾ ಯುರಗ ಕೊನೆಯ ಚಕ್ರವರ್ತಿಯಾಗಿದ್ದಾನೆ ದ್ವಾಪರಾ ಯುಗವು ಮುಗುದು ಕಲಿಯುಗವು ಪ್ರಾರಂಭವಾಗುವ ಆ ಯುಗ ಸಂಧಿಕಾಲದಲ್ಲಿ ಆಳಿಕೊಂಡಿದ್ದವನು ಜನಮೇಜಯ ಹೀಗಾಗಿ ಕಲಿಯುಗದ ಪ್ರಥಮ ಚಕ್ರವರ್ತಿಯೂ ಅವನೇ ಆಗಿದ್ದಾನೆ ಒಂದು ರೀತಿಯಲ್ಲಿ ಆತನೊಬ್ಬ ಯುಗ ಪ್ರವರ್ತಕ ಚಿಕ್ಕಂದಿನಲ್ಲಿಯೇ ಚಕ್ರವರ್ತಿ ಪಟ್ಟವನ್ನು ಸ್ವೀಕರಿಸಿ ಹಲವು ವರ್ಷಗಳವರೆಗೆ ಭರತ ಖಂಡವನ್ನು ಆಳಿ ಬೆಳೆದು ದೊಡ್ಡವನಾಗಿದ್ದರೂ ಆತನಿಗೆ ತನ್ನ ತಂದೆಯ ಸಾವಿನ ರಹಸ್ಯವು ತಿಳಿದಿರಲಿಲ್ಲ ಏಕೆಂದರೆ ಆತನ ತಾಯಿ ಇರಾವತಿಯಾಗಲೀ ಮಂತ್ರಿಗಳಾಗಲೀ ಕುಲಪುರೋಹಿತರಾಗಲೀ ಯಾರೂ ಕೂಡಾ ಆತನಿಗೆ ವಿಷಯವನ್ನು ತಿಳಿಸಿರಲಿಲ್ಲ.

ಹೀಗಿರುವಾಗ ವೇದ ಮುನಿಗಳ ಆಶ್ರಮದಲ್ಲಿ ಆತನ ಶಿಷ್ಯನಾದ ಉತ್ತಂಕ ಎಂಬ ವಟುವೊಬ್ಬನು ವಿದ್ಯಾಭ್ಯಾಸವನ್ನು ಪೂರೈಸಿದ ಬಳಿಕ ತನ್ನ ಗುರುಗಳಿಗೆ ಗುರುಕಾಣಿಕೆಯನ್ನು ಕೊಡಬೇಕೆಂದು ತೀರ್ಮಾನಿಸಿದನು ಆದರೆ ವೇದ ಮುನಿಗಳು ಶಿಷ್ಯರಿಂದ ಕಾಣಿಕೆಗಳನ್ನು ಸ್ವೀಕರಿಸುತ್ತಿರಲಿಲ್ಲ ಆದರೂ ಉತ್ತಂಕನು ಬಂದು ಗುರುಗಳಿಗೆ ವಂದಿಸಿ ಗುರುಗಳೇ ನಿಮ್ಮ ದಯೆಯಿಂದಲೇ ನಾನು ವಿದ್ಯೆಯನ್ನು ಕಲಿತೆ ನಾನು ನಿಮಗೆ ಗುರುದಕ್ಷಿಣೆಯನ್ನು ಕೊಡಲು ಬಯಸಿದ್ದೇನೆ ನಿಮಗೆ ಏನು ಬೇಕೆಂಬುದನ್ನು ಹೇಳಿ ತಂದು ಕೊಡುವೆ ಅದನ್ನು ದಯವಿಟ್ಟು ಸ್ವಿಕರಿಸಬೇಕು ಎನ್ನುತ್ತಾನೆ ಆಗ ವೇದಮುನಿಗಳು ನೀನು ಉತ್ತಮ ಪ್ರಜೆಯಾದರೆ ಅದೇ ನನಗೆ ಗುರುಕಾಣಿಕೆ ನಾನು ಕಾಣಿಕೆಗಳನ್ನು ಸ್ವೀಕರಿಸುವುದಿಲ್ಲ ಬೇಕಿದ್ದರೆ ನೀನು ನನ್ನ ಪತ್ನಿಯನ್ನು ಕೇಳಿ ನೋಡು ಎಂದು ಉತ್ತಂಕನನ್ನು ತನ್ನ ಹೆಂಡತಿಯೆಡೆಗೆ ಕಳುಹಿಸುತ್ತಾನೆ.

ಉತ್ತಂಕನು ಗುರುಪತ್ನಿ ಇದ್ದೆಡೆಗೆ ಹೋಗಿ ವಂದಿಸಿ ತಾಯಿ ನನ್ನ ವಿದ್ಯಾಭ್ಯಾಸ ಮುಗಿದಿದೆ ನೀವು ನನ್ನನ್ನು ಮಗನಂತೆ ಸಾಕಿ ಸಲಹಿದ್ದೀರಿ ನಾನು ಗುರುಕಾಣಿಕೆಯನ್ನು ಕೊಡಲು ಬಯಸಿದ್ದೇನೆ ನಿಮಗೆ ಏನು ಬೇಕು ಹೇಳಿ ಎನ್ನುತ್ತಾನೆ. ಆಗ ಆಕೆಯು ನಾನು ಪೂಜೆಗೆಂದು ಸುಮಂಗಲಿಯರನ್ನು ಆಹ್ವಾನಿಸಿದ್ದೇನೆ ಅವರೆಲ್ಲ ಬರುವಾಗ ನಾನು ಬರಿ ಕಿವಿಯಲ್ಲಿ ಇರುವುದು ಸರಿಯಲ್ಲ ಹೀಗಾಗಿ ಆ ಒಂದು ದಿನದ ಮಟ್ಟಿಗೆ ಪೌಷ್ಯ ರಾಜನ ಹೆಂಡತಿಯ ಕಿವಿಯ ಓಲೆಗಳನ್ನು ತಂದು ಕೊಡುವೆಯಾ ಎಂದು ಕೇಳುತ್ತಾಳೆ. ಉತ್ತಂಕನು ಆದೀತು ಎಂದು ಹೇಳಿ ಅವಳಿಗೆ ವಂದಿಸಿ ಅಲ್ಲಿಂದ ತೆರಳುತ್ತಾನೆ.

ಉತ್ತಂಕನು ಪೌಷ್ಯ ರಾಜನ ಅರಮನೆಗೆ ಹೋಗುತ್ತಾನೆ ತನ್ನನ್ನು ಕಾಣಲೆಂದೇ ಬಂದಿರುವ ವಟುವಿಗೆ ರಾಣಿಯು ವಂದಿಸಿ ಉಪಚರಿಸಿ ಬಂದಿರುವ ಕಾರಣವನ್ನು ಕೇಳುತ್ತಾಳೆ. ಉತ್ತಂಕನು ವಿಷಯವನ್ನು ತಿಳಿಸಿದಾಗ ರಾಣಿಗೆ ತುಂಬಾ ಸಂತೋಷವಾಗುತ್ತದೆ. ಋಷಿ ಪತ್ನಿಯೋರ್ವಳು ನನ್ನ ಆಭರಣಗಳನ್ನು ಬಯಸಿದ್ದಾಳೆ ಎಂದರೆ ಅದು ನನ್ನ ಭಾಗ್ಯವೆಂದೇ ತಿಳಿಯುತ್ತೇನೆ. ಕೇವಲ ಒಂದು ದಿನದ ಮಟ್ಟಿಗಲ್ಲ ಶಾಶ್ವತವಾಗಿ ಅವುಗಳನ್ನು ಆ ಮುನಿ ಪತ್ನಿಗೆ ನೀಡುತ್ತೇನೆ ಆದರೆ ಕೊಂಡುಹೋಗುವಾಗ ಜಾಗ್ರತೆ ಇವು ಮೂರು ಲೋಕಗಳಲ್ಲಿಯೂ ಪ್ರಸಿದ್ದವಾದ ಆಭರಣಗಳಾಗಿವೆ. ಈ ಹಿಂದೆ ತಕ್ಷಕನು ಅವುಗಳನ್ನು ಅಪರಿಸಲು ಪ್ರಯತ್ನಿಸಿದ್ದಾನೆ ಹೀಗಾಗಿ ವಿಶೇಷವಾಗಿ ಎಚ್ಚರವಹಿಸಿ ಎಂದು ಹೇಳಿ ಉತ್ತಂಕನಿಗೆ ನವರತ್ನ ಖಚಿತವಾದ ಆ ಆಭರಣಗಳನ್ನು ನೀಡುತ್ತಾಳೆ



ಶ್ರೀ ಶಿವಮೂರ್ತಿ ಕೀಲಾರ
ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್(ರಿ),
ಪ್ರಧಾನ ಕಾರ್ಯದರ್ಶಿ, ಅಭಿನವ ಭಾರತಿ ಶಿಕ್ಷಣ ಟ್ರಸ್ಟ್(ರಿ). ಮಂಡ್ಯ

ಉತ್ತಂಕನು ಆಭರಣಗಳನ್ನು ಗಂಟು ಕಟ್ಟಿಕೊಂಡು ಬರುವಾಗ ಪೌಷ್ಯ ರಾಣಿಯು ಹೇಳಿದಂತೆಯೇ ದಾರಿಯಲ್ಲಿ ತಕ್ಷಕನು ಅವನನ್ನು ಅಡ್ಡಯಿಸುತ್ತಾನೆ ಫಣಿಗಳಿಗೆ ಮಣಿ ರತ್ನಗಳ ಮೇಲೆ ವ್ಯಾಮೋಹ ಜಾಸ್ತಿ ತಾನೇ ಹೀಗಾಗಿ ಅವನು ಉತ್ತಂಕನನ್ನು ವಂಚಿಸಿ ಅವನ ಬಳಿಯಿದ್ದ ಆಭರಣಗಳನ್ನು ಬಲಾತ್ಕಾರವಾಗಿ ಕೊಂಡೊಯ್ದು ಪಾತಾಳದಲ್ಲಿ ಬಚ್ಚಿಡುತ್ತಾನೆ.

ಅಸಹಾಯಕನಾದ ಉತ್ತಂಕನು ಅಳುತ್ತಾನೆ ಹೇಗಾದರೂ ಮಾಡಿ ತಕ್ಷಕನ ಮೇಲೆ ಸೇಡು ತೀರಿಸಿಕೊಳ್ಳಬೇಕು ಎಂದುಕೊಂಡು ನೇರವಾಗಿ ಹಸ್ತಿನಾವತಿಗೆ ಹೋಗುತ್ತಾನೆ ಅಲ್ಲಿ ಅರಸನಾದ

ಜನಮೇಜಯನನ್ನು ಗುಪ್ತವಾಗಿ ಭೇಟಿಮಾಡಿ ಆತನಿಗೆ ಆತನ ತಂದೆ ಪರೀಕ್ಷಿತನ ಮರಣ ರಹಸ್ಯವನ್ನು ತಿಳಿಸುತ್ತಾನೆ ತನ್ನ ತಂದೆಯ ಮರಣಕ್ಕೆ ತಕ್ಷಕನೇ ಕಾರಣ ಎಂಬ ವಿಷಯವನ್ನು ತಿಳಿದ ಜನನಮೇಜಯನು ಸಿಟ್ಟಿನಿಂದ ಹಾರಾಡುತ್ತಾನೆ. ಆಗ ಉತ್ತಂಕನು ತಕ್ಷಕನ ಮೇಲೆ ಸೇಡು ತೀರಿಸಿಕೊಳ್ಳುವ ಇಚ್ಛೆ ನಿನಗಿದ್ದರೆ ಈ ಕೂಡಲೇ ಸರ್ಪಯಗವನ್ನು ಮಾಡು, ನಗಕುಲವನ್ನೇ ನಾಶ ಮಾಡು ಎಂದು ಹೇಳಿ ಆತನಲ್ಲಿ ನಾಗದ್ವೇಷದ ಬೀಜವನ್ನು ಬಿತ್ತಿ ಹೊರಟು ಹೋಗುತ್ತಾನೆ

ತಾಯಿಯಾಗಲೀ, ಮಂತ್ರಿಗಳಾಗಲೀ,



ಕುಲಪುರೋಹಿತರಾಗಲೀ ಎಷ್ಟೆಹೇಳಿದರೂ ಕೇಳದ ಜನಮೇಜಯನು ತಕ್ಷಕನ ಮೇಲೆ ಕುಪಿತನಾಗಿ ಸಂಪೂರ್ಣ ನಾಗಕುಲವನ್ನೇ ನಾಶಪಡಿಸುತ್ತೇನೆ ಎಂಬುದಾಗಿ ಸರ್ಪಯಾಗವನ್ನು ಮಾಡಲು ಸಂಕಲ್ಪಿಸುತ್ತಾನೆ ಜಗತ್ತಿನಲ್ಲಿ ಈ ಹಿಂದೆ ಯಾರೂ ಮಾಡದೇ ಇದ್ದ ಮುಂದೆ ಕೂಡಾ ಯಾರೂ ಮಾಡದಂತಹ ಸರ್ಪಯಾಗವನ್ನು ಮಾಡಲು ಉದ್ಯುಕ್ತನಾಗುತ್ತಾನೆ

ಸರ್ಪಯಾಗಕ್ಕಾಗಿ ಬೃಹತ್ ಯಾಗ ಶಾಲೆಯನ್ನು ನಿರ್ಮಿಸಿ ಋಷಿ ಮುನಿಗಳನ್ನು ಬ್ರಾಹ್ಮಣರನ್ನೆಲ್ಲ ಆಮಂತ್ರಿಸಿ ಬೇಡಿದ ವಿಪ್ರರಿಗೆ ಅವರಿಗೆ ಬೇಕಾದುದನ್ನು ದಾನ ಮಾಡುತ್ತಾ ವಿಜೃಂಭಣೆಯಿಂದ ಯಾಗವನ್ನು ನಡೆಸುತ್ತಾನೆ ಅಧ್ವರ್ಯುವಾಗಿ ತಾನೇ ಕುಳಿತುಕೊಳ್ಳುತ್ತಾನೆ ಪುರೋಹಿತರು ಮಂತ್ರೋಚ್ಚಾರಣೆ ಮಾಡಿ ಆಹ್ವಾನಿಸಿದಂತೆ ಮಂತ್ರದ ವಶೀಕರಣಕ್ಕೆ ಸಿಲುಕಿದ ನಾಗಗಳು ಒಂದೊಂದಾಗಿ ಬಂದು ಯಜ್ಞಕುಂಡಕ್ಕೆ ಬಿದ್ದು ಆಹುತಿಯಾಗತೊಡಗುತ್ತವೆ ಹಲವು ನಾಗ ಸಂತತಿಗಳು ಅಳಿದು ಹೋಗುತ್ತವೆ ಎಲ್ಲಾ ನಾಗಗಳು ಸುಟ್ಟು ಹೋದರೂ ತಕ್ಷಕನ ಸುಳಿವೇ ಇರಲಿಲ್ಲ ಆತನನ್ನು ಸ್ವರ್ಗದಲ್ಲಿ ದೇವೇಂದ್ರನು ರಕ್ಷಿಸಿ ಹಿಡಿದಿಟ್ಟುಕೊಂಡಿದ್ದನು ಇದನ್ನು ಅರಿತ ಪುರೋಹಿತರು ದೇವೇಂದ್ರ ಸಹಿತನಾಗಿ ತಕ್ಷಕನು ಬರಲಿ ಎಂಬುದಾಗಿ ಮಂತ್ರ ಉಚ್ಚರಿಸುತ್ತಾರೆ ಹೆದರಿದ ದೇವೇಂದ್ರ ತಾನು ತಪ್ಪಿಸಿಕೊಳ್ಳುತ್ತಾನೆ.

ಇನ್ನೇನು ತಕ್ಷಕನು ಬಂದು ಬೆಂಕಿಯಲ್ಲಿ ಬೀಳುತ್ತಾನೆ ಎಂಬಾಗ ಆಸ್ತೀಕನೆಂಬ ವಟುವು ಬಂದು ತಡೆಯುತ್ತಾನೆ ಜನಮೇಜಯನಿಗೆ ಕೋಪಬರುತ್ತದೆ ಎಲೈ ವಟುವೇ, ನಿನಗೇನು ಬೇಕೋ ಕೇಳು ಕೊಡುವೆ ಯಾಗವನ್ನು ನಿಲ್ಲಿಸಬೇಡ ಎನ್ನುತ್ತಾನೆ. ಆಗ ನಾಸ್ತಿಕನು ಜನಮೇಜಯನನ್ನು ಸಮತಯಿಸಿ ಆತನ ತಂದೆಯ ಮರಣದ ನಿಜ ವೃತ್ತಾಂತವನ್ನು ತಿಳಿಸುತ್ತಾನೆ ತಕ್ಷಕನದ್ದೇನೂ ತಪ್ಪಿರಲಿಲ್ಲ ಅವನು ಕಚ್ಚುವುದಕ್ಕೆ ಮುನಿಯ ಶಾಪವೇ ಕಾರಣ ಮತ್ತೆ ನಿನ್ನ ತಂದೆ ಆತನ ತಂದೆಗೆ ಮಾಡಿದ ಅಪಚಾರವೇ ಕಾರಣ ಮತ್ತೆ ನಿನ್ನ ತಂದೆಯದ್ದೂ ತಪ್ಪಿರಲಿಲ್ಲ ಆತ ಹಾಗೆ ತಪ್ಪಿ ನಡೆಯಲು ಕಲಿಯ ಪ್ರೇರಣೆಯೇ ಕಾರಣ ಇದೆಲ್ಲವೂ ಕಲಿ ಕಾಲದ ಮಹಿಮೆ. ಆದ್ದರಿಂದ ನೀನು ಯಜ್ಞವನ್ನು ನಿಲ್ಲಿಸು ಸುಮ್ಮನೇ ನಾಗ ಶಾಪಕ್ಕೆ ಒಳಗಾಗಬೇಡ ಎನ್ನುತ್ತಾನೆ.

ಆಸ್ತೀಕನ ಮಾತನ್ನು ಒಪ್ಪಿದ ಜನಮೇಜಯನು ಸರ್ಪಯಾಗವನ್ನು ನಿಲ್ಲಿಸುತ್ತಾನೆ. ಆದರೆ ಅಷ್ಟರಲ್ಲಾಗಲೇ ಹೆಚ್ಚು ಕಡಿಮೆ ಎಲ್ಲಾ ಸರ್ಪಕುಲಗಳು ಯಜ್ಞಕ್ಕೆ ಆಹುತಿಯಾಗಿ ಕೇವಲ ತಕ್ಷಕನ ಕುಲವೊಂದು ಮಾತ್ರ ಉಳಿದಿರುತ್ತದೆ. ಸರ್ಪಯಾಗವನ್ನು ನಿಲ್ಲಿಸಿದ ತರುವಾಯ ಜನಮೇಜಯನು ತಕ್ಷಕನಲ್ಲಿ ಕ್ಷಮೆ ಯಾಚಿಸುತ್ತಾನೆ ತಕ್ಷಕನು ಜನಮೇಜಯನನ್ನು ಕ್ಷಮಿಸುತ್ತಾನೆ ಆದರೂ ಅಷ್ಟರಲ್ಲಾಗಲೇ ಆತನು ಹಲವು ನಾಗಗಳನ್ನು ದಹಿಸಿದ್ದರಿಂದ ಜನಮೇಜಯನಿಗೆ ನಾಗದೋಷ ಬರುತ್ತದೆ.

ಸರ್ಪಯಾಗವು ಅರ್ಧಕ್ಕೇ ನಿಂತುಹೋಗಿ ತಕ್ಷಕನು ಬದುಕಿ ಉಳಿದುದನ್ನು ತಿಳಿದ ಉತ್ತಂಕನು ಸಿಟ್ಟಾಗುತ್ತಾನೆ ಆತನು ಮತ್ತೆ ಪುನಹ ಅಗ್ನಿಯನ್ನು ಆಹ್ವಾನಿಸಿ ಆತನಿಗೆ ಸರ್ಪಲೋಕವಾದ ಪಾತಾಳವನ್ನ ಸುಡುವಂತೆ ಆಜ್ಞಾಪಿಸುತ್ತಾನೆ ಅಗ್ನಿಯು ಪಾತಾಳವನ್ನು ಸುಡಲಾರಂಭಿದಾದಾಗ ಮತ್ತೆ ಸಂಪ್ಷಕ್ಕೆ 16ನೇ ಪುಟಕ್ಕೆ...

# ಜನನಿ ಜನ್ಮಭೂಮಿ

ನಾರಾಯಣಸ್ವಾಮಿಯವರ ವಿಶಾಲವಾದ ಕೃಷಿಭೂಮಿಯ ಮೇಲೆ ಹೊಂಗಿರಣವನ್ನು ಬೀರುತ್ತಾ ಸೂರ್ಯ ಮುಳುಗಲು ಪ್ರಾರಂಭಿಸಿದ್ದ. ಸ್ವಾಮಿಯವರು ತನ್ನ ವರಾಂಡಾದಲ್ಲಿ ಮರದ ರಾಕಿಂಗ್ ಕುರ್ಚಿಯ ಮೇಲೆ ಕುಳಿತು, ದಿಗಂತವನ್ನು ನೋಡುತ್ತಾ, ಆಲೋಚನೆಯಲ್ಲಿ ಮುಳುಗಿದ್ದರು. ತಂಪಾದ ತಂಗಾಳಿಮರಗಳ ಮೂಲಕ ಸದ್ದು ಮಾಡುತ್ತಾ, ತಾಜ ಮಣ್ಣಿನ ಮತ್ತು ಅರಳಿದ ಮಲ್ಲಿಗೆಯ ಪರಿಮಳವನ್ನು ತನ್ನೊಂದಿಗೆ ಹೊತ್ತು ತಂದಿತ್ತು.

ಸ್ವಾಮಿಯವರು ಅವರ ಮಗ ಮಧುಸೂದನನ ಚಿಕ್ಕ ವಯಸ್ಸಿನ ಒಂದು ಫೋಟೋ ಫ್ರೇಮ್ ಹಿಡಿದುಕೊಂಡು ನಿಧಾನವಾಗಿ ಆ ಚಿತ್ರದ ಮೇಲೆ ತನ್ನ ಬೆರಳುಗಳನ್ನು ಆಡಿಸಿದರು. ಅವರ ಮನಸ್ಸು ಸಂತೋಷ ಮತ್ತು ದುಃಖಗಳಿಂದ ಕೂಡಿದ ಹಿಂದಿನ ದಿನಗಳಿಗೆ ಕರೆದೊಯ್ಯಿತು.



**ಲತಾ ವಿ ಎಸ್**
**ಹವ್ಯಾಸಿ ಕಥಾ ಲೇಖಕಿ**
**ಬೆಂಗಳೂರು.**

ಮೂವತ್ತು ವರ್ಷಗಳ ಕೆಳಗೆ ಒಂದೇ ದಿನದಲ್ಲಿ ಅವರ ಜೀವನವೇ ಬುಡಮೇಲಾಗಿತ್ತು. ಒಂದು ಕಡೆ ಮಗನ ಜನನದ ಖುಷಿಯಾದರೆ ಮತ್ತೊಂದೆಡೆ ಅವರ ಪತ್ನಿ ತಮ್ಮ ಮಗುವಿಗೆ ಜನ್ಮ ನೀಡಿದ ರಾತ್ರಿಯೇ ನಿಧನರಾಗಿದ್ದರು. ಹೆಂಡತಿಯ ಮರಣದ ದುಃಖದಲ್ಲಿದ್ದ ಅವರ ಕೈಗೆ ಪುಟ್ಟ ಕಂದನ ಆಗಮನವಾಗಿತ್ತು. ನಂತರದ ದಿನಗಳು ಪರಿಪೂರ್ಣವಾಗಿ ಮಗನ ಲಾಲನೆ ಪಾಲನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ನಿಷ್ಠಾವಂತ ಅನುಯಾಯಿ ಮಣಿಕಂಠ ಎಲ್ಲ ರೀತಿಯಲ್ಲಿ ಸಹಾಯ ಮಾಡಿ ಮಗುವಿನ ಪೋಷಣೆಯಲ್ಲಿ ಅವರಿಗೆ ಬೆಂಬಲ ನೀಡಿದ್ದರು.

ಸ್ವಾಮಿಯವರು ತಮ್ಮ ಹೊಲದ ಕೆಲಸದ ನಡುವೆ ಹಳ್ಳಿಯ ಅಭಿವೃದ್ಧಿಗೂ ಶ್ರಮಿಸುತ್ತಿದ್ದರು ಹಾಗೂ ತಮ್ಮ ಹೊಲದಲ್ಲಿ ಕೆಲಸ ಮಾಡುವ ಪ್ರತಿಯೊಂದು ಕೆಲಸಗಾರರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರು ಮಗನನ್ನು ಬೆಳೆಸಲು ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಮರುಮದುವೆಯ ಯೋಚನೆಯನ್ನು ಮಾಡಲಿಲ್ಲ. ಅವರು ತೆಗೆದುಕೊಂಡ ಪ್ರತಿಯೊಂದು ನಿರ್ಧಾರವೂ ಮಗನ ಭವಿಷ್ಯಕ್ಕಾಗಿ ಇತ್ತು ಮತ್ತು ಇದು ಅವನನ್ನು ಬುದ್ಧಿವಂತ ಮತ್ತು ಕಠಿಣ ಪರಿಶ್ರಮಿಯಾಗಿ ರೂಪಿಸಿತು.

ಮಧು ಓದಿನಲ್ಲಿ ಚುರುಕಾಗಿ ಇದ್ದು ಪ್ರತಿ ಹಂತವನ್ನು ತುಂಬ ಚೆನ್ನಾಗಿ ಓದಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾದನು. ಉನ್ನತ ವ್ಯಾಸಂಗಕ್ಕಾಗಿ ಅಮೇರಿಕಾದ ಒಳ್ಳೆಯ ಯೂನಿವರ್ಸಿಟಿಯಲ್ಲಿ ಅವಕಾಶ ಸಿಕ್ಕಾಗ, ತಂದೆಯಾಗಿ ಸ್ವಾಮಿಯವರು ತುಂಬ ಖುಷಿ ಪಟ್ಟಿದ್ದರು ಹಾಗೆಯೇ ಅವನ ಅನುಪಸ್ಥಿತಿಯನ್ನು ನೆನಸಿ ನೋವನ್ನು ಪಟ್ಟಿದ್ದರು. ಇದೆಲ್ಲ ಕಳೆದು ಹತ್ತು ವರ್ಷಗಳು ಈಗ. ಈ ಹತ್ತು ವರುಷಗಳಲ್ಲಿ ಕೆಲವು ಬಾರಿ ತಂದೆಯನ್ನು ನೋಡಲು ಮಧೂ ಬಂದಿದ್ದ.

ಜವಾಬ್ದಾರಿಯುಳ್ಳ ಮಗನಾದ ಮಧು ಪ್ರತಿ ವಾರ ಕರೆ ಮಾಡಿ, ಅರ್ಧ ಗಂಟೆ ಕಾಲ ತನ್ನ ತಂದೆಯ ಆರೋಗ್ಯವನ್ನು ವಿಚಾರಿಸುತ್ತಿದ್ದ. ಪ್ರೀತಿಯಿಂದ ಮಾತನಾಡಿಸುತ್ತಿದ್ದ. ಹಳ್ಳಿಯ ಹೊಲದ ಕೆಲಸದ ಬಗ್ಗೆ ಮತ್ತು ಇತರ ಎಲ್ಲ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದ.

ಮೂರು ವರ್ಷಗಳ ಹಿಂದೆ ಇದೇ ಫಾರ್ಮ್ ಹೌಸ್‌ನಲ್ಲಿ ತುಂಬ ಅದ್ದೂರಿಯಾಗಿ ಮಗನ ಮದುವೆಯು ಆಗಿತ್ತು. ಮದುವೆಯ ನಂತರ ಕೆಲಸ ಮತ್ತು ಸಿಟಿ ಬದಲಾಯಿಸಿದ್ದ ಮಧು, ಕೆಲಸದ ಒತ್ತಡದಲ್ಲಿ ಸಿಲುಕಿದ್ದ. ಒಂದು ವರುಷದ ಕೆಳಗೆ ಮುದ್ದಾದ ಮಗನ ಜನ್ಮವು ಆಗಿತ್ತು. ಮಧು ತನ್ನ ತಂದೆಗೆ ಪ್ರತಿ ಬಾರಿಯೂ ಕೆಲವು ದಿನಗಳ ಮಟ್ಟಿಗಾದರೂ ಅಮೇರಿಕಾಗೆ ಬರಲು ಒತ್ತಾಯ ಮಾಡುತ್ತಿದ್ದ. ಆದರೆ ಸ್ವಾಮಿಯವರಿಗೆ ತಮ್ಮ ಹೊಲ ಮತ್ತು ಜನರನ್ನು ಬಿಟ್ಟು ಹೋಗುವುದು ತುಂಬ ಕಷ್ಟದ ವಿಷಯವಾಗಿತ್ತು.

ಆದರೆ ಕಳೆದ ಆರುತಿಂಗಳಿಂದ ಎಲ್ಲವು ಬದಲಾಗಿತ್ತು. ಪ್ರತಿವಾರದ ವಿಡಿಯೋ ಕಾಲ್ ಈಗ ತಿಂಗಳಿಗೊಮ್ಮೆ ಆಗಿತ್ತು. ಮಾತು ಕೂಡ ತುಂಬ ಮಿತವಾಗಿತ್ತು. ಪ್ರತಿ ಸಲ ಕಾಲ್ ಮಾಡಿದಾಗ "ಅಪ್ಪ ಕೆಲಸದ ಒತ್ತಡ ಹೆಚ್ಚಾಗಿದೆ. ಯಾವುದಕ್ಕೂ ಸಮಯವೇ ದೊರಕುತ್ತಿಲ್ಲ" ಇದೇ ಉತ್ತರ. ಈ ವಿಷಯ ಸ್ವಾಮಿಯವರನ್ನು ಯೋಚನೆಗೆ ತೊಡಗಿಸಿತ್ತು.

ಒಂದು ತಿಂಗಳ ಹಿಂದೆ ಸ್ವಾಮಿಯವರು ಮಗನೊಂದಿಗೆ ಮಾತನಾಡುತ್ತಾ ತಮ್ಮ ಅರವತ್ತನೇ ವರುಷದ ಪ್ರಯುಕ್ತ ದೇವರಿಗೆ ಒಂದು ವಿಶೇಷ ಪೂಜೆ ಮತ್ತು ಎಲ್ಲರಿಗೂ ಅನ್ನ ಸಂತರ್ಪಣೆ ಮಾಡುವ ಆಸೆ ವ್ಯಕ್ತಪಡಿಸಿದರು. ಅದಕ್ಕಾಗಿ ನೀನು ಭಾರತಕ್ಕೆ ಬರಲು ಸಾಧ್ಯವೇ ಎಂದು ವಿಚಾರಿಸಿದ್ದಾಗ ಮಧು ತುಂಬ ಖುಷಿಯಿಂದ ಎಲ್ಲ ವ್ಯವಸ್ಥೆ ಮಾಡುವಂತೆ ಹೇಳಿದ್ದ. ಆದರೆ ಎರಡು ದಿನಗಳ ಹಿಂದೆ ಕಾಲ್ ಮಾಡಿದಾಗ ಮಧು ಕೆಲಸದ ನೆವ ಹೇಳಿ ಬರಲು ಕಷ್ಟ

ಆಗುತ್ತದೆ ಎಂದು ಹೇಳಿದ. ಸ್ವಾಮಿ ತುಂಬ ಆಸೆಯಿಂದ ಮಗನ ಸಂಸಾರವನ್ನು ನೋಡುವ ಕಾತುರದಿಂದ ಇದ್ದರು. ಆದರೆ ಮಗನ ಮಾತು ಅವರನ್ನು ತುಂಬ ನಿರಾಶೆಗೆ ತಳ್ಳಿತು. ನಾಳೆ ಪೂಜೆಗೆ ಬರುವ ಪ್ರತಿಯೊಬ್ಬರಿಗೆ ಏನೆಂದು ಉತ್ತರಿಸುವುದು ಎಂದು ಅವರ ಮನಸ್ಸು ಚಿಂತೆಗೆ ಒಳಗಾಯಿತು.

ಮಗನ ಪೋನ್ ಕರೆಯ ನಂತರ, ಸ್ವಾಮಿಯವರು ಮೊದಲಬಾರಿಗೆ ಹತಾಶರಾಗಿ ಸಹಾಯಕ ಮಣಿಕಂತನೊಂದಿಗೆ "ದೇವರು ಎಂದಾದರೂ ನನ್ನ ಮೌನ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆಯೇ?" ಎಂದು ಕೇಳಿದ್ದರು. ಅದಕ್ಕೆ ಮಣಿಕಂತ ಹೇಳಿದ್ದ "ಅಣ್ಣಾ ದೇವರು ನಿಜವಾಗಿಯೂ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಖಂಡಿತವಾಗಿ ನಿಮ್ಮ ಪ್ರಾರ್ಥನೆಗಳಿಗೂ ಉತ್ತರಿಸುತ್ತಾನೆ".

ಇಂದು ಸ್ವಾಮಿಯವರ 60ನೇ ಹುಟ್ಟುಹಬ್ಬದ ಮುನ್ನಾದಿನ ಸ್ವಾಮಿಯವರು ಮರದ ರಾಕಿಂಗ್ ಕುರ್ಚಿಯಲ್ಲಿ ಕುಳಿತು ಮೌನವಾಗಿ ತಮ್ಮ ಮನೆಯ



ಪ್ರವೇಶದ್ವಾರವನ್ನು ದಿಟ್ಟಿಸುತ್ತಿದ್ದರು. ತುಂಬ ದಿನಗಳಿಂದ ಮನಸ್ಸಿನಲ್ಲಿ ಚಿಂತೆ ಬಹಳವಾಗಿ ಕಾಡುತ್ತಾ ಇತ್ತು. ನನ್ನ ವೃದ್ಧಾಪ್ಯ ಬರಿ ಕಾಯುವಿಕೆಯಲ್ಲಿಯೇ ಮುಗಿಯುತ್ತದೆಯಾ ಎಂದು. ನನ್ನ ಹುಟ್ಟುಹಬ್ಬಕ್ಕೆ ಬರಲಾಗದ ಮಗ ನನ್ನ ಆಸೆಯಂತೆ ನನ್ನ ಕೊನೆಗಾಲದಲ್ಲಿ ನಿಜವಾಗಿಯೂ ನನ್ನೊಡನೆ ಬಂದು ಇರುತ್ತಾನಾ ಈ ಎಲ್ಲ ಪ್ರಶ್ನೆಗಳು ಪ್ರಶ್ನೆಯಾಗಿಯಾ ಉಳಿದಿದ್ದವು. ಆದರೂ ಅವರ ಹೃದಯದಲ್ಲಿ ಒಂದು ಸಣ್ಣ ಭರವಸೆ ಉಳಿದಿತ್ತು.

ತಮ್ಮ 60ನೇ ಹುಟ್ಟು ಹಬ್ಬದ ಬೆಳಿಗ್ಗೆ ನಾರಾಯಣಸ್ವಾಮಿ ತಮ್ಮ ಅಭ್ಯಾಸದಂತೆ ಬೆಳಗಿನ ಜಾವಕ್ಕೆ ಮುಂಚೆಯೇ ಎದ್ದು ಪ್ರಾತಃಕರ್ಮಗಳನ್ನೆಲ್ಲ ಮುಗಿಸಿ ಬರುವ ಅತಿಥಿಗಳನ್ನೆಲ್ಲ ಬರಮಾಡಿಕೊಳ್ಳುವುದಕ್ಕೆ ಸಜ್ಜಾದರು. ಮನೆ ತಾಜಾ ಹೂವುಗಳು ಮತ್ತು ದೂಪ ದ್ರವ್ಯದ ವಾಸನೆಯಿಂದ ಕೂಡಿತ್ತು. ಮಣಿಕಾಂತ ಈಗಾಗಲೇ ಮನೆಯ ಮುಂದೆಯೆ ಇರುವ ಸಣ್ಣ ದೇವಾಲಯವನ್ನು ಚೆನ್ನಾಗಿ ಅಲಂಕರಿಸಿದ್ದರು. ಕೃಷಿ ಕಾರ್ಮಿಕರು ಹೊರಗೆ ಜಮಾಯಿಸಿ ಪೂಜೆ ಪ್ರಾರಂಭವಾಗುವುದನ್ನು ಕಾಯುತ್ತಿದ್ದರು.

ಸ್ವಾಮಿ ದೀಪವನ್ನು ಬೆಳಗಿಸಿ, ದೇವರಿಗೆ ಕೈ ಮುಗಿದು ಮಣಿಕಂಠನೆಡೆಗೆ ತಿರುಗಿ ಪೂಜೆಯನ್ನು ಪ್ರಾರಂಭಿಸೋಣವೇ ಎಂದು ಕೇಳಿದರು. ಅಡುಗೆ ಮನೆಯ ಬಳಿ ನಿಂತಿದ್ದ ಮಣಿಕಂತ, "ಅಣ್ಣಾ, ದೇವರ ಪ್ರಸಾದವನ್ನ ಸಿದ್ದಪಡಿಸುತ್ತಿದೇನೆ. ಸ್ವಲ್ಪ ತಡೆಯಿರಿ" ಎಂದು ಹೇಳಿದನು.

ಸರಿಯೆಂದು ತಲೆಯಾಡಿಸುತ್ತಾ ಸ್ವಾಮಿಯವರು ಮನೆಯ ಮುಂಭಾಗದ ಗೇಟನ್ನು ನೋಡುತ್ತಾ ತನ್ನ ಕುರ್ಚಿಯಲ್ಲಿ ಕುಳಿತರು. ಆಗಲೇ ಕರೆದಿದ್ದ ಅತಿಥಿಗಳು ಬರಲಾರಂಭಿಸಿದ್ದರು. ದೂರದಲ್ಲಿ ಕಾರು ನಿಂತ ಶಬ್ದ ಕೇಳಿಸಿತು. ಹೃದಯದಲ್ಲಿ ನಿರೀಕ್ಷೆಯನ್ನು ತುಂಬಿಕೊಂಡು ಅದರತ್ತಲೇ ನೋಡಿದರು. ಕಾರಿನಿಂದ ಇಳಿದ ಮಗ ಓಡಿ ಬಂದು ಹತ್ತಿರದಲ್ಲಿ ನಿಂತು "ಅಪ್ಪ" ಎಂದು ಕರೆದನು. ಸ್ವಾಮಿ ಮತ್ತೊಮ್ಮೆ ಕಣ್ಣು ಸರಿಪಡಿಸಿಕೊಂಡು ತಲೆಯೆತ್ತಿ ನೋಡಿದಾಗ ಮಧು ಪ್ರೀತಿಯಿಂದ ನೋಡುತ್ತಾ ನಿಂತಿದ್ದನು. ಅವನ ಪಕ್ಕದಲ್ಲಿ ಸೊಸೆ ಮೊಮ್ಮಗನನ್ನು ಎತ್ತಿಕೊಂಡಿದ್ದಳು. ಒಂದು ಕ್ಷಣ ಸ್ವಾಮಿ ತನ್ನ ಕಣ್ಣನ್ನೇ ನಂಬದಾದರು ನಂತರ ಖುಷಿಯಿಂದ ನಗುತ್ತಾ ಮಗನನ್ನು ತಬ್ಬಿದರು. ಮಧು ಸಂತೋಷದಿಂದ ತನ್ನ ಮಗನನ್ನು ತನ್ನ ತಂದೆಯ ತೋಳುಗಳಲ್ಲಿ ಇಟ್ಟನು. ಮಗುವಿನ ಸಣ್ಣ ಬೆರಳುಗಳು ಸ್ವಾಮಿಯ ಕೈಯನ್ನು ಹಿಡಿದವು. ಆಕ್ಷಣದಲ್ಲಿ ಇದುವರೆಗೂ ಇದ್ದ ಮನಸ್ಸಿನ ದುಗುಡ ಮತ್ತು ಮಗನ ಮೇಲೆ ಇದ್ದ ಬೇಸರ ಸಂಪೂರ್ಣವಾಗಿ ಮರೆಯಾಯಿತು. ಮಧು ಗೌರವದಿಂದ ತನ್ನ ತಂದೆಯ ಪಾದಗಳನ್ನು ಮುಟ್ಟಿ ನನ್ನನ್ನು ಆಶೀರ್ವದಿಸಿ ಅಪ್ಪಾ ಎಂದು ಹೇಳಿದನು. ಸ್ವಾಮಿ ಮಗನ ತಲೆಯನ್ನು ಸವರುತ್ತಾ ಸಂತೋಷವಾಗಿರು ಮಗನೇ ಎಂದು ಹೇಳಿದರು.

ಮಧು ತನ್ನ ತಂದೆಯ ಜೊತೆ ದೇವರ ಪೂಜೆಯಲ್ಲಿ ತೊಡಗಿಸಿಕೊಂಡನು. ಬಂದ ಅತಿಥಿಗಳೊಂದಿಗೆ ಪ್ರೀತಿಯಿಂದ ಮಾತನಾಡಿಸಿದರು. ಅನ್ನ ಸಂತರ್ಪಣೆಯಲ್ಲಿ ಸಕ್ರಿಯವಾಗಿಭಾಗವಹಿಸಿದನು. ಇದನ್ನೆಲ್ಲಾ ನೋಡಿದ ಸ್ವಾಮಿಯವರ ಕಣ್ಣುಗಳು ತುಂಬಿ ಬಂದವು.

ಸಂಜೆ ಎಲ್ಲ ಅತಿಥಿಗಳೂ ತೆರಳಿದ ನಂತರ ಸ್ವಾಮಿ ಮತ್ತು ಮಧು ವರಾಂಡಾದಲ್ಲಿ ಕುಳಿತು ಕಾಫಿ ಕುಡಿಯುತ್ತಿದ್ದರು. ಆಗ ಮಧು ಅಪ್ಪನ ಕಡೆಗೆ ತಿರುಗಿ "ಅಪ್ಪಾ ನಾನು ನಿಮಗೆ ಒಂದು ಮುಖ್ಯವಾದ ವಿಷಯ ಹೇಳಬೇಕು." ಸ್ವಾಮಿ ಉಸಿರನ್ನು ಬಿಗಿಯಾಗಿ ಹಿಡಿದುಕೊಂಡು ಮಗನ ಕಡೆಗೆ ನೋಡಿದರು.

ಮಧು ತನ್ನ ತಂದೆಯನ್ನು ನೋಡಿ ಮೃದುವಾಗಿ ನಕ್ಕು

ಹೇಳಿದ 'ಕಳೆದ ಆರು ತಿಂಗಳಿನಿಂದ, ನಾನು ಕೆಲಸದಲ್ಲಿ ಮಾತ್ರ ನಿರತನಾಗಿರಲಿಲ್ಲ. ಅಮೇರಿಕಾದಲ್ಲಿ ನನ್ನ ಕೆಲಸಕ್ಕೆ ರಾಜೀನಾಮೆ ನೀಡಿ ಭಾರತಕ್ಕೆ ಶಾಶ್ವತವಾಗಿ ಬರುವ ಪ್ರಯತ್ನದಲ್ಲಿ ಇದ್ದೆ. ಅಲ್ಲಿರುವ ನಮ್ಮ ಮನೆಯನ್ನು ಮಾರಿ, ಬೇರೆ ಎಲ್ಲ ವ್ಯವಸ್ಥೆಗಳನ್ನು ಮಾಡುತ್ತಿದ್ದೆ. ಅದಕ್ಕಾಗಿಯೇ ನಾನು ಕಳೆದ ಕೆಲವು ತಿಂಗಳುಗಳಿಂದ ನಿಮ್ಮೊಡನೆ ಸರಿಯಾಗಿ ಮಾತನಾಡಲು ಆಗಲಿಲ್ಲ. ನಿಮಗೆ ನಿಮ್ಮ ಹುಟ್ಟು ಹಬ್ಬದಂದು ನಾನು ಅಚ್ಚರಿಯನ್ನು ನೀಡಲು ಬಯಸಿದ್ದೆ"

ಸ್ವಾಮಿಯ ಬೆರಳುಗಳೂ ಕುರ್ಚಿಯನ್ನು ಬಿಗಿಹಿಡಿದವು. ಅವರ ಗಂಟಲಿನಿಂದ ಮಾತುಗಳೇ ಹೊರಡಲಿಲ್ಲ. ಮಧು ತನ್ನ ಮಾತುಗಳನ್ನು ಮುಂದುವರಿಸಿದ. "ನಾನು ನಮ್ಮ ಅಗತ್ಯಕ್ಕಿಂತ ಹೆಚ್ಚಾಗಿ ಸಾಕಷ್ಟು ಸಂಪಾದಿಸಿದ್ದೇನೆ. ಅಪ್ಪಾ ಈಗ ನೀವು ನನ್ನನ್ನು ಬೆಳೆಸಿದಂತೆಯೇ ನನ್ನ ಮಗನನ್ನು ಇಲ್ಲಿ ಈ ಭೂಮಿಯಲ್ಲಿ ಬೆಳೆಸಲು ನಾನು ಬಯಸುತ್ತೇನೆ. ಅವನು ಕುಟುಂಬದಿಂದ, ನಮ್ಮ ಸಂಪ್ರದಾಯಗಳಿಂದ ದೂರ ಬೆಳೆಯಬೇಕೆಂದು ನಾನು ಬಯಸುವುದಿಲ್ಲ. ನೀವು ನನಗೆ ಕಲಿಸಿದ ಮೌಲ್ಯಗಳನ್ನು ಅವನು ಕಲಿಯಬೇಕೆಂದು ನಾನು ಬಯಸುತ್ತೇನೆ".

ಬಹಳ ಸಮಯದವರೆಗೆ, ಸ್ವಾಮಿ ಏನನ್ನೂ ಹೇಳಲಿಲ್ಲ. ಅವರ ಹೃದಯವು ತುಂಬಿತ್ತು. ಅವರು ದೇವರಲ್ಲಿ ಸದಾ ತಮ್ಮ ಮಗನೊಂದಿಗೆ ಸ್ವಲ್ಪ ಕಾಲ ಕಳೆಯಬೇಕೆಂಬ ಪ್ರಾರ್ಥನೆಯನ್ನು ಮಾತ್ರ ಮಾಡುತ್ತಾ ಇದ್ದರು. ಆದರೆ ಈಗ ಮಗ ತನ್ನೊಂದಿಗೆ ಶಾಶ್ವತವಾಗಿ ಇರುತ್ತಾನೆ ಎಂಬ ವಿಷಯ ಮನಸ್ಸಿಗೆ ತುಂಬ ಸಮಾಧಾನವನ್ನು ತಂದುಕೊಟ್ಟಿತು. ಮಗ ತನ್ನ ತಂದೆಯ ಕೈಯಲ್ಲಿ ಕೈ ಇಟ್ಟು 'ಅಪ್ಪ ನಾನು ನಿಮ್ಮೊಡನೆಯೇ ಇನ್ನು ಮುಂದೆ ಇರುತ್ತೇನೆ' ಎಂದು ಹೇಳಿದಾಗ ಸ್ವಾಮಿಯವರು ಒಂದು ಬಾರಿ ಕಣ್ಣು ಮುಚ್ಚಿ ದೇವರಿಗೆ ಮನಸ್ಸಿನಲ್ಲಿಯೇ ಮೌನವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಆ ರಾತ್ರಿ ಅಭ್ಯಾಸದಂತೆ ಸ್ವಾಮಿ ವರಾಂಡಾದಲ್ಲಿರುವ ತನ್ನ ಮರದ ರಾಕಿಂಗ್ ಕುರ್ಚಿಯಲ್ಲಿ ಕುಳಿತಾಗ, ಅವರೊಡನೆ ಅವರ ಪುಟ್ಟ ಮೊಮ್ಮಗ ತೊಡೆಯಲ್ಲಿ ಕುಳಿತು ಆಟವಾಡುತ್ತಾ ಇದ್ದನು. ಸಮೀಪದಲ್ಲಿ ಮಧು ಮತ್ತು ಅವನ ಹೆಂಡತಿ ಮೌನವಾಗಿ ಆದೃಶ್ಯವನ್ನು ವೀಕ್ಷಿಸಿದರು. ತನ್ನ ಇಡೀ ಜೀವಮಾನದ ಕಾಯುವಿಕೆ ಮತ್ತು ಹಂಬಲದ ಪ್ರತಿಫಲವಾಗಿ ದೇವರೇ ತನ್ನ ಮೌನ ಪ್ರಾರ್ಥನೆಗೆ ಉತ್ತರ ಕೊಟ್ಟಿದ್ದಾನೆ ಎಂದು ಸ್ವಾಮಿಯವರಿಗೆ ಅರಿವಾಯಿತು. ದೇವರ ಮನೆಯಲ್ಲಿ ದೀಪವು ಪ್ರಕಾಶ ಮಾನವಾಗಿ ಬೆಳಗುತ್ತಿತ್ತು.

**ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ** ★

# ನಾಗರ ಪಂಚಮಿ 4 ಸರ್ಪಯಾಗ

...13ನೇ ಪುಟದಿಂದ ಒಳಗಾದ ತಕ್ಷಕನು ದೇಂದ್ರನಲ್ಲಿ ಮೊರೆ ಇಡುತ್ತಾನೆ ಆಭರಣಗಳನ್ನು ಉತ್ತಂಕನಿಗೆ ಹಿಂದಿರುಗಿಸಿ ಆತನಲ್ಲಿ ಕ್ಷಮೆ ಬೇಡುವಂತೆ ಬೇಡುವಂತೆ ದೇವೇವಂದ್ರನು ತಕ್ಷಕನಿಗೆ ಸಲಹೆ ನೀಡುತ್ತಾನೆ. ಅಂತೆಯೇ ತಕ್ಷಕನು ಆಭರಣಗಳನ್ನು ಹಿಂದಿರುಗಿಸಿ ಕ್ಷಮೆಯಾಚಿಸುತ್ತಾನೆ. ಆಭರಣಗಳನ್ನು ಪುನಹ ಪಡೆದ ಉತ್ತಂಕನು ಅಗ್ನಿಯನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಾನೆ ಮತ್ತು ನಂತರ ತನ್ನ ಗುರುಪತ್ನಿಗೆ ಆಭರಣಗಳನ್ನು ನೀಡಿ ತನ್ನ ಗುರುದಕ್ಷಿಣೆಯನ್ನು ಪೂರೈಸುತ್ತಾನೆ.

ಇತ್ತ ನಾಗದೋಷದ ಪರಿಣಾಮವಾಗಿ ಜನಮೇಜಯನನ್ನು ಕುಷ್ಟರೋಗವು ಬಾಧಿಸುತ್ತದೆ. ಮುಂದೆ ಗುರುವಾಯೂರು ಕ್ಷೇತ್ರದಲ್ಲಿ ಶ್ರೀಹರಿಯ ದರ್ಶನವಾದೊಡನೆ ಆತನ ದೊಷಗಳೆಲ್ಲವೂ ಪರಿಹಾರವಾಗುತ್ತವೆ ಹಾಗು ಮುಂದೆ ಹಲವು ಕಾಲಗಳವರೆಗೆ ಜನಮೇಜಯನು ಈ ಕಲಿಯುಗದಲ್ಲಿಯೂ ಚಕ್ರವರ್ತಿಯಾಗಿ ಮೆರೆಯುತ್ತಾನೆ.

ಆಸ್ತೀಕನು ತನ್ನನ್ನು ಹಾಗೂ ತನ್ನ ಕುಲದವರನ್ನು ಉಳಿಸಿದ್ದರಿಂದಾಗಿ ಹರುಷಗೊಂಡು "ಯಾರು ಆಸ್ತೀಕ ಆಸ್ತೀಕ ಆಸ್ತೀಕ ಎಂಬುದಾಗಿ ಮೂರು ಬಾರಿ ಉಚ್ಚರಿಸುತ್ತಾರೋ ಅರವರಿಗೆ ನಾಗದೋಷ ತಟ್ಟದೇ ಇರಲಿ" ಎಂಬ ವರವೊಂದನ್ನು ತಕ್ಷಕನು ಕರುಣಿಸುತ್ತಾನೆ.

ಹೀಗೆ ಜನಮೇಜಯನು ಸರ್ಪಯಾಗವನ್ನು ನಿಲ್ಲಿಸಿದ ದಿನವೇ ಶ್ರಾವಣ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿ ಅದನ್ನೇ ನಾವು ನಾಗರ ಪಂಚಮಿ ಎಂಬುದಾಗಿ ಆಚರಿಸುತ್ತೇವೆ. ಅಷ್ಟಕುಲ ನಾಗಗಳಾದ ಅನಂತ(ಶೇಷ), ವಾಸುಕಿ, ಪದ್ಮ, ಮಹಾಪದ್ಮ, ತಕ್ಷಕ, ಕುಲೀಕ, ಕಾರ್ಕೋಟಕ ಮತ್ತು ಶಂಖಪಾಲ ಇವುಗಳನ್ನು ನಾವು ಆ ದಿನ ಪೂಜಿಸುತ್ತೇವೆ. ಅರಿಶಿನ ಕುಂಕುಮ ಅಕ್ಕಿ ಮತ್ತು ಹೂವನ್ನು ನಾದೇವರಿಗೆ ಅರ್ಪಿಸುತ್ತೇವೆ. ಹಸಿಹಾಲು, ತುಪ್ಪ, ಸಕ್ಕರೆಯನ್ನು ನಾಗದೇವರ ಮೂರ್ತಿಗೆ ಅರ್ಪಿಸುತ್ತೇವೆ. ಪೂಜೆ ಪೂರ್ಣಗೊಂಡ ಬಳಿಕ ನಾಗದೇವರಿಗೆ ಆರತಿ ಬೆಳಗುತ್ತೇವೆ. ಹಾವಾಡಿಗರಿಗೆ ದಾನ ಮಾಡುವ ಕ್ರಮವೂ ಕೆಲವು ಕಡೆ ಇದೆ. ಪೂಜೆಯ ಅಂತ್ಯದಲ್ಲಿ ನಾಗ ಪಂಚಮಿಯ ಕಥೆಯನ್ನು ಕೇಳುವುದು ಒಳ್ಳೆಯದು. ★

# " ನೆಮ್ಮದಿ ನಾಶ ಮಾಡಿದ ತೊಂಬತೊಂಬತ್ತು.....!

ಬಹಳ ವರ್ಷಗಳ ಹಿಂದೆ ಓರ್ವ ಸಾಮ್ರಾಟನಿದ್ದನು. ಆತನಿಗೆ ನಿತ್ಯ ಕ್ಷೌರ ಮತ್ತು ತಲೆ ಮಾಲೀಶ್ ಮಾಡಲು ಓರ್ವ ಕ್ಷೌರಿಕ ಬರುತ್ತಿದ್ದ. ಈ ಸೇವೆಗಾಗಿ ಸಾಮ್ರಾಟ ಆತನಿಗೆ ದಿನಕ್ಕೆ ಒಂದು ರೂಪಾಯಿ ನೀಡುತ್ತಿದ್ದ. ಕ್ಷೌರಿಕ ಸಾಮ್ರಾಟನ ಬಳಿ ಬಂದಾಗಲೆಲ್ಲ ತುಂಬ ಖುಷಿ ಖುಷಿಯಿಂದ, ಪ್ರಸನ್ನ ಚಿತ್ತನಾಗಿರುತ್ತಿದ್ದ. ತನಗೆ ದೊರೆಯುತ್ತಿದ್ದ ಆ ಒಂದು ರೂಪಾಯಿಯಲ್ಲಿ ತಾನು ಚೆನ್ನಾಗಿ ತಿಂದುಂಡು, ಮಿತ್ರರಿಗೆಲ್ಲ ತಿನಿಸಿ ಬಹಳ ಆರಾಮಾಗಿ ಇದ್ದ. ಆತ ರಾತ್ರಿ ಮಲಗುವಾಗ ಜೇಬಿನಲ್ಲಿ ಒಂದು ಕಾಸೂ ಇರುತ್ತಿರಲಿಲ್ಲ. ಮರುದಿನ ಸಾಮ್ರಾಟ ಕೊಟ್ಟ ನಂತರವೇ ಮತ್ತೆ ಖರ್ಚು ಮಾಡಿ. ಸಂತಸದಿಂದ ಇರುತ್ತಿದ್ದ.

ಸದ ಈತನ ಅಪಾರ ಖುಷಿ ಕಂಡ ಸಾಮ್ರಾಟರಿಗೆ ಒಳ ಒಳಗೆ ಒಂದು ರೀತಿಯ ಈರ್ಷೆ ಹುಟ್ಟತೊಡಗಿತು. "ನನ್ನ ಬಳಿ ನಾಲ್ಕಾರು ತಲೆಮಾರಿನವರು ತಿಂದು ತೇಗಿದರೂ ಖರ್ಚಾಗದಷ್ಟು ಧನ-ಕನಕ, ಸಕಲ ಸವಲತ್ತು ಗಳಿದ್ದರೂ ನನಗೆ ಒಂದು ದಿನವೂ ಈ ರೀತಿ ಆನಂದದಿಂದ ಇರಲು ಆಗಲ್ಲವಲ್ಲ...ಛೇ..." ಎಂಬ ಚಿಂತೆ ಆತನ ತಲೆ ಕೋರೆಯಲಾರಂಭಿಸಿತು. ಮನದ ದುಗುಡು ತಾಳಲಾರದೇ ಒಂದು ದಿನ ಆ ಸಾಮ್ರಾಟ್ ಕ್ಷೌರಿಕನಿಗೆ." 'ಅಲ್ಲಯ್ಯಾ..... ನೀನು ಸಾದ ಇಷ್ಟೊಂದು ನಿಶ್ಚಿಂತೆಯಿಂದ ಆರಾಮಾಗಿರುವೆಯಲ್ಲ ಇದರ ಒಳ ಗುಟ್ಟೇನು...?" ಎಂದು ಕೇಳಿದ. ಆಗ ಆ ಕ್ಷೌರಿಕ ಅದೇ ನಗುಮೊಗದಿಂದ "ಮಹರಾಜರೇ... ಇದರ ಬಗ್ಗೆ ನನಗೆ ಏನು ಗೊತ್ತಿಲ್ಲ, ಅಲ್ಲದೇ ನಾನೇನು ಬುದ್ದಿವಂತನೂ ಅಲ್ಲ, ಆದರೆ ತಾವು ನನ್ನ ಸಂತೋಷ ಕಂಡು ಯಷ್ಟು ಚಕಿತರಾಗುತ್ತಿರೋ... ನಾನು ತಮ್ಮನ್ನು ಕಂಡಾಗಲೆಲ್ಲ ಅಷ್ಟೇ ಚಕಿತನಾಗುತ್ತೇನೆ, ಅಲ್ಲ ಮಹ ಸ್ವಾಮಿ... ನನ್ನಲ್ಲ ಸಂತೋಷ ಪಡಲು ಏನಿದೆ? ತಮ್ಮಲ್ಲಾದ ಯಣಿಕೆ ಮಾಡದಷ್ಟು ಧನ-ಕನಕ, ಸಕಲ ಸವಲತ್ತು ಯಲ್ಲಾ ಇದೆ... ಆದರೂ ತಾವು ಸದಾ ಯೋಚಸುತಿರುವಂತೆ ಕಾಣುತ್ತಿರಲ್ಲ.. "ಎಂದು ಆ ದಿನದ ಕೆಲಸ ಪೂರೈಸಿ ಹೊರಟು ಹೋದ. ಇತ್ತ ಅಸಮಾಧಾನದಿಂದ ಕೂಡಿದ ಸಾಮ್ರಾಟ.

ತನ್ನ ಮಂತ್ರಿ ಯನ್ನು ಕೂಗಿ ಸಕಲ ವಿಚಾರ ತಿಳಿಸಿ "ಹೇಗಾದರು ಮಾಡಿ ಆ ಕ್ಷೌರಿಕನ ಆನಂದದ ರಹಸ್ಯ ಕಂಡುಹಿಡಿಯಿರಿ. ಆತನಲ್ಲಿಯ ಆಗುಣ ನನ್ನ ಮನದಲ್ಲಿ ಜ್ವಾಲೆಯನ್ನೇ ಹತ್ತಿಸಿದೆ. ಹೀಗಾಗಿ ನಾನೂ ಸಹ ಕ್ಷೌರಿಕ ನಾನಾಗಿದ್ದರೆ ಚೆಂದ ಇರುತ್ತಿತ್ತೇನೋ ಎಂದೆನಿಸುತ್ತೀದೆ. ಈ ವಿಚಾರದಿಂದ ನನ್ನ ನಿದ್ರೆ ನೀರಡಿಕೆಗಳೆಲ್ಲ ದೂರವಾಗಿವೆ. ಈ ಸಮಸ್ಯೆ ಬೇಗ ಬಗೆಹರಿಸಿ" ಎಂದು ತನ್ನ ಅಂತರ್ಯದ ದುಗುಡವನ್ನು ಬಿಚ್ಚಿಟ್ಟ.

ಸಾಮ್ರಾಟನ ಸಂಕಟದ ಮಾತು "ಮಹಾರಾಜರೇ...ನೀವೇನೂ ಚಿಂತೆ ಮಾಡಬೇಡಿ; ನಿಮ್ಮ ನೆಮ್ಮದಿ ಹಾಳು ಮಾಡಿದ ಆ ಕ್ಷೌರಿಕನಿಗೆ ಸರಿಯಾಗಿ ರಿಪೇರಿ ಮಾಡುವೆ "ಎಂದಾಗ ಸಾಮ್ರಾಟ್ ಗಾಬರಿಗೋಳ್ಳುತ್ತ" ಅಯ್ಯೋ. ಮಂತ್ರಿಗಳೇ, ಅಂಥಾದ್ದೆನು ಅನಾಹುತ ಮಾಡುವಿರಿ ಎಂದು ಕೇಳಿದ. ಆಗ ಮಂತ್ರಿ ನೀವು ಕಲ್ಪಿಸಿಕೊಂಡು ಆತನಿಗೆ ನಾನೇನು ಮಾಡಲ್ಲ... ಆದರೆ ಆತ ತನ್ನ ನೆಮ್ಮದಿಯನ್ನು ತಾನೇ ಹಾಳು ಮಾಡಿಕೊಳ್ಳುವಂತೆ ಮಾಡುವೆ ನನಗೆ ಇನ್ನೇನೂ ಬೇಡೆ ಎಂಟು ದಿನಗಳ ಟೈಂ ಕೊಡಿ ಎಂದು ಹೇಳಿದ. ಆತನ ಮಾತಿಗೆ ಒಪ್ಪಿ ಸಾಮ್ರಾಟ" "ಆಯ್ತು" ಎಂದನು. ಅದೇ ದಿನ ರಾತ್ರಿ ಮಂತ್ರಿ ಮಾರುವೇಷ ತೊಟ್ಟು, ಆ ಕ್ಷೌರಿಕನ ಮನೆ ಎದುರು ತೊಂಬತ್ತೊಂಬತ್ತು ರೂಪಾಯಿ ನಾಣ್ಯಗಳಿರುವ ಪುಟ್ಟ ಚೀಲ ಇಟ್ಟು ಬರುತ್ತಾನೆ. ಮರುದಿನ ಬೆಳಗಾದ ಕೂಡಲೆ ಆ ಕ್ಷೌರಿಕ ತನ್ನ ಮನೆ ಬಾಗಿಲೆದುರು ಇದ್ದ ನಾಣ್ಯದ ಚೀಲ ಕಂಡು ಖುಷಿ ಪಡುತ್ತ ಒಳಗೆ ತಂದು ಎಣಿಸಿದಾಗ ಅದರಲ್ಲಿ ಬರಾಬ್ಬರಿ ತೊಂಬತ್ತೊಂಬತ್ತು ರೂಪಾಯಿ ನಾಣ್ಯಗಳಿರುವುದನ್ನ ಖಚಿತಪಡಿಸಿಕೊಂಡು... ಆಹ್ಹಾ ಇದಕ್ಕೆ ಕೇವಲ ಒಂದು ರೂಪಾಯಿ ಸೇರಿಸಿದಲ್ಲ ನೂರು ಆಗುವುದು ಖಚಿತ, ಹೇಗೂ ಸಾಮ್ರಾಟ ತನಗೆ ದಿನ ನಿತ್ಯ ಒಂದು ರೂಪಾಯಿ ಕೊಟ್ಟೇ ಕೊಡುತ್ತಾನೆ ಅದರಲ್ಲಿ ಖರ್ಚು ಕಡಿತಗೊಳಿಸುತ್ತ ಬಂದರೆ ನೂರೇನು ಇನ್ನೂ ಕೂಡಿಡಬಹುದು" ಎಂದು ಆಲೋಚಿಸಲು ಶುರುಮಾಡಿದ.

ಆದರೆ ವಾಸ್ತವದಲ್ಲಿ ಅಂದಿನಿಂಲೇ ಆತನೊಳಗಿದ್ದ ನೆಮ್ಮದಿಯ ಭದ್ರಕೋಟೆ ಬಿರುಕು ಬಿಡಲಾಂಭಿಸಿದ ಸತ್ಯ ಆತನಿಗೆ ತಿಳಿಯಲಿಲ್ಲ. ಕುಳಿತರೆ ನಿಂತರೆ ಆ ಹಣ ಹೇಗೆ ಹೆಚ್ಚು ಮಾಡುವುದು...? ಯೋಚನೆ ಶುರು ಇಟ್ಟಿತು. ಹಣ ಉಳಿಸಲು ಆತ ಕಷ್ಟ ಪಟ್ಟು ಉಪವಾಸ ಮಾಡತೊಡಗಿದ. ಎಂದಿನಂತೆ ಸಾಮ್ರಾಟನ ಬಳಿ ಕೆಲಸಕ್ಕೆ ಬಂದಾಗ ಆತನ ಮುಖದಲ್ಲಿ ಕಳೆಗುಂದಿರುವುದನ್ನು ಕಂಡ ಸಾಮ್ರಾಟ ತನ್ನ ಮನದೊಳಗೆ" ಪರವಾಗಿಲ್ಲ ನಮ್ಮ ಮಂತ್ರಿಗಳ ಉಪಾಯ ಫಲಿಸಿದಂತೆ ಕಾಣುತ್ತಿದೆ"... ಎಂದು ಅಂದು ಕೊಂಡು, ಎರಡು ಮೂರು ದಿನಗಳ ನಂತರ ಸಾಮ್ರಾಟ ಕ್ಷೌರಿಕನಿಗೆ "ಏನಯ್ಯ... ನೀನು ಮೊದಲಿನಂತೆ ಇಲ್ಲವಲ್ಲ... ಸದಾ ಏನೋ ಚಿಂತೆ ಮಾಡುತ್ತಿರುವಂತೆ ಕಾಣುತ್ತೀ... ನಿನ್ನ ಮುಖ ದಿನೆ ದಿನೆ ಕಳೆಗುಂದುತ್ತಿದೆ ಯಾಕೆ ಏನಾಯ್ತು?"ಎಂದು ಕೇಳಿದಾಗ ಆತ "ಸಪ್ಪೆ ಮುಖದಿಂದ ಮೆಲು ಧ್ವನಿಯಲ್ಲಿ "ಏನಿಲ್ಲಾ... ಮಹಾರಾಜರಿಗೆ ಹಾಗೇನಿಲ್ಲ ನಾನು ಚೆನ್ನಾಗಿದ್ದೇನೆ" ಎಂದು ಸತ್ಯ ಮರೆಮಾಚತ್ತ ಉತ್ತರಸಿದ. ಅಷ್ಟಕ್ಕೇ ಸುಮ್ಮನಾಗದ ಸಾಮ್ರಾಟ ನನಗೇನೂ ನೀನು ಸಂತಸದಿಂದ ಇರುವಿ ಎಂದು ಅನಿಸುತ್ತಿಲ್ಲ, ಮೊದಲಿನಂತೆ ನಿನ್ನ ಕಣ್ಣಲ್ಲಿ ಹೊಳಪಿಲ್ಲ, ಮುಖ ಬಾಡಿದಂತಿದೆ ಏಕೆ ಊಟ ತಿಂಡಿ ನಿದ್ರೆ ಸರಿಯಾ ಮಾಡುತ್ತಿಲ್ಲವೆ...? ಎಂದು ಕಾಳಜಿ ಪೂರ್ವಕವಾಗಿ ಕೇಳಿದಾಗ ಕ್ಷೌರಿಕನಿಗೆ ತಡೆದು ಕೊಳ್ಳಲಾಗಲಿಲ್ಲ ಆಗ ಆತ.

ಮಹಾರಾಜರೇ... ತಾವು ಇಷ್ಟು ಮುತುವರ್ಜಿ ವಹಿಸಿ ಕೇಳುತ್ತಿರೆಂದಮೇಲೆ ನಾನೇಕೆ ನಿಮ್ಮೆದುರು ಬಚ್ಚಿಟ್ಟುಕೊಳ್ಳಲಿ.., ಐದಾರು ದಿನಗಳ ಹಿಂದೆ ರಾತ್ರಿ ಸಮಯ ಯಾರೋ ನನ್ನ ಮನೆಯ ಬಾಗಿಲಿನೆದುರು ತೊಂಬತ್ತೊಂಬತ್ತು ರೂಪಾಯಿ ನಾಣ್ಯಗಳಿರುವ ಚೀಲ ಇಟ್ಟಿದ್ದರು, ಅದನ್ನು ಪಡೆದು ಮೊದ ಮೊದಲು ಖುಷಿ ಪಟ್ಟೆ... ಆನಂತರ ಇದನ್ನು... ಇನ್ನೂರು ಮಾಡುವ ಬಗೆ ಹೇಗೆ ಎನ್ನುವ ಚಿಂತೆ ಆರಂಭವಾಗಿ ನನ್ನ ನೆಮ್ಮದಿಯನ್ನೇ ಕಿತ್ತಿಕೊಂಡಿತು" ಎಂದು ಉತ್ತರಿಸಿದ. ಆಗ ರಾಜನು ಸಮಾಧಾನದಿಂದ "ನೋಡು ನಿನ್ನ ಬಳಿ ಏನೂ ಇಲ್ಲದಿದ್ದಾಗ ಯಾವ ಚಿಂತೆಯೂ ಇಲ್ಲದೇ ಆನಂದವಾಗಿದ್ದೆ ಯಾವಾಗ ಕೂಡಿಡುವ ಯೋಚನೆ ನಿನ್ನ ತಲೆ ಹೊಕ್ಕಿತೋ ಅದು ನಿನ್ನ ನೆಮ್ಮದಿಯನ್ನೇ ಸರ್ವನಾಶ ಮಾಡಿತು ಅಲ್ಲವೆ...?" "ಎಂದಾಗ ಆತ ಕ್ಷೌರಿಕ ಸಪ್ಪೆ ಸ್ವರದಲ್ಲಿ 'ಹೌದು ಮಹಾರಾಜರೆ ತಾವು ಹೇಳಿದ್ದು ನಿಜ' 'ಎಂದು ಕೈ ಮುಗಿದು ಅಲ್ಲಿಂದ ನಿರ್ಗಮಿಸಿದ..........

ಅರವಿಂದ .ಜಿ. ಜೋಷಿ., ಮೈಸೂರು.

# ದೇವರನ್ನು ನಂಬಿದವರಿಗೇ ಯಾಕೆ ಹೆಚ್ಚು ಹೆಚ್ಚು ಕಷ್ಟ ಬರುತ್ತದೆ.....?



ಕೆಲವೊಮ್ಮೆ ನಾವು ಎಷ್ಟೇ ದೇವರನ್ನು ಬೇಡಿಕೊಂಡರು ಪೂಜಿಸಿದರೂ ನಮ್ಮಲ್ಲಿನ ಕಷ್ಟಗಳು ದೂರವಾಗುವುದಿಲ್ಲ. ಬದಲಾಗಿ ಮತ್ತಷ್ಟು ಕಷ್ಟಗಳು ಸೃಷ್ಟಿಯಾಗುತ್ತಲೇ ಇರುತ್ತದೆ. ಅದರಲ್ಲೂ ಯಾರು ಹೆಚ್ಚು ದೇವರನ್ನು ಪೂಜಿಸುತ್ತಾರೋ, ನಂಬುತ್ತಾರೋ ಅವರೇ ಯಾವಾಗಲು ಕಷ್ಟವನ್ನು ಅನುಭವಿಸುತ್ತಿರುತ್ತಾರೆ. ಇದರಿಂದಾಗಿ ಹೆಚ್ಚಿನ ಜನರು ಆಸ್ತಿಕರಾಗಿದ್ದವರು ನಾಸ್ತಿಕರಾದ ಉದಾಹರಣೆಗಳಿಗೆ. ಎಷ್ಟೇ ದೇವರ ಬಳಿ ನಮ್ಮ ಕಷ್ಟಗಳನ್ನು ಹೇಳಿಕೊಂಡರೂ ಅವನು ಕರುಗುತ್ತಿಲ್ಲ, ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಿಲ್ಲವೆಂದು ದೇವರು ಪೂಜೆಯನ್ನು ಮಾಡದೆ ಇರುವವರೂ ಇದ್ದಾರೆ.

ದೇವರೆ ಪೂಜೆಯನ್ನು ಮಾಡುವವರಿಗೆ, ದೇವರನ್ನು ಅತಿಯಾಗಿ ನಂಬುವವರಿಗೇ ಯಾಕೆ ದೇವರು ಕಷ್ಟಗಳನ್ನು ನೀಡುತ್ತಾನೆ ಎಂಬುದರ ಬಗ್ಗೆ ನಿಮಗೆ ಈಗಲೇ ಪ್ರಶ್ನೆ ಹುಟ್ಟಿಕೊಂಡಿರಬಹುದು. ಇದೇ ರೀತಿ ಪ್ರಶ್ನೆ ಮಹಾಭಾರತದಲ್ಲಿ ಅರ್ಜುನನಿಗೂ ಕಾಡತೊಡಗಿತ್ತು. ಇದನ್ನು ಅರ್ಜುನ ಶ್ರೀ ಕೃಷ್ಣನ ಬಳಿ ಕೇಳುತ್ತಾನೆ. ಈ ವಿವರಣೆಯನ್ನು ನಾವು ಭಗವದ್ಗೀತೆಯಲ್ಲೂ ನೋಡಬಹುದು. ಅರ್ಜುನನ ಪ್ರಶ್ನೆಗೆ ಶ್ರೀ ಕೃಷ್ಣ ಈ ಕಥೆಯ ಮೂಲಕ ಉತ್ತರಿಸುತ್ತಾನೆ.



**ಸಂತೋಷ್ ಕುಮಾರ್**
**ಪ್ರಾಧ್ಯಾಪಕರು, ಬೆಂಗಳೂರು**

**ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ ಕಥೆಯಿದು :** ಶ್ರೀ ಕೃಷ್ಣ ಅರ್ಜುನನ್ನು ಕುರಿತು, 'ಅರ್ಜುನ, ಓರ್ವ ಒಬ್ಬ ಆಸ್ತಿಕನಾದ ಹಾಗು ಒಬ್ಬ ನಾಸ್ತಿಕನಾದ ಇಬ್ಬರು ಶಿಷ್ಯರನ್ನು ಹೊಂದಿರುತ್ತಾನೆ. ಆಸ್ತಿಕನಾದ ಶಿಷ್ಯ ಯಾವಾಗಲೂ ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದ. ದೇವರ ಪೂಜೆ, ಪುನಾಸ್ಕಾರ, ದೇವರ ಮಂತ್ರ ಪಠಣೆ, ದೇವರ ಧ್ಯಾನ, ದೇವಸ್ಥಾನಗಳಿಗೆ ಭೇಟಿ ನೀಡುವಂತಹ ಧಾರ್ಮಿಕ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದ. ಆದರೆ ನಾಸ್ತಿಕನಾದ ಶಿಷ್ಯನಿಗೆ ದುಶ್ಚಟಗಳನ್ನು ಹೊಂದಿದ್ದನು. ಅವನು ಎಂದಿಗು ದೇವರ ಮುಖವನ್ನು ನೋಡಿದವನಾಗಿರಲಿಲ್ಲ.

ನಾಸ್ತಿಕನಾದ ಶಿಷ್ಯನಿಗೆ ಒಂದು ದಿನ ರಾತ್ರಿ ಕುಡಿದು ರಸ್ತೆಯಲ್ಲಿ ಹೋಗುವಾಗ ಚಿನ್ನದ ಮೂಟೆಯೊಂದು ಸಿಗುತ್ತದೆ. ಅವನು ಸಂತೋಷದಿಂದ ನಾನಿನ್ನು ಆಗರ್ಭ ಶ್ರೀಮಂತ. ಯಾರಿಂದಲೂ ನನ್ನಷ್ಟು ಶ್ರೀಮಂತರಾಗಲು ಸಾಧ್ಯವಿಲ್ಲವೆಂದು ಬೀಗುತ್ತಾನೆ. ಅದೇ ಸಮಯಕ್ಕೆ ಆಸ್ತಿಕನಾದ ಶಿಷ್ಯನ ಬಂದು ಅವನ ತಪ್ಪನ್ನು ತಿದ್ದಿಕೊಳ್ಳುವಂತೆ ಹೇಳುತ್ತಾನೆ. ಇದು ಯಾರದ್ದೋ ಹಣ ಇದನ್ನು ತೆಗೆದುಕೊಳ್ಳುವುದು ಸರಿಯಲ್ಲ ಎನ್ನುತ್ತಾನೆ. ಆಗ ನಾಸ್ತಿಕನಾದ ಶಿಷ್ಯ, ನೋಡು... ನೀನು ದೇವರು, ಪೂಜೆ, ಧ್ಯಾನವೆಂದು ಧರ್ಮ ಮಾರ್ಗದಲ್ಲಿ ನಡೆದು ಏನನ್ನು ಪಡೆದುಕೊಂಡಿದ್ದಿಯಾ? ಪೂಜೆ- ಪುನಸ್ಕಾರಗಳಿಂದ ಏನು ಸಿಕ್ಕಿದೆ ಎಂದು ಹೇಳುತ್ತಾ ಅವನಿಗೆ ಅವಮಾನಿಸುತ್ತಾನೆ. ಆಸ್ತಿಕ ಶಿಷ್ಯನಿಗೆ ಅವನು ಹೇಳಿರುವುದು ಸರಿಯೆಂದೆನಿಸಿ ಇದಕ್ಕೆ ಉತ್ತರವನ್ನು ಪಡೆದುಕೊಳ್ಳಲು ತನ್ನ ಗುರುವಿನಲ್ಲಿಗೆ ಬರುತ್ತಾನೆ.

ಆಗ ಗುರುಗಳು ಆತನಿಗೆ ಪ್ರಸ್ತುತ ಜನ್ಮದಲ್ಲಿ ನಾವು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ - ಕರ್ಮಗಳಿಗೆ ಬೆಲೆ ತೆರಬೇಕಾಗುತ್ತದೆ. ಹಿಂದಿನ ಜನ್ಮದಲ್ಲಿ ನೀನು ನಾಸ್ತಿಕನಾಗಿದ್ದೆ, ಮಾಡಬಾರದ ತಪ್ಪುಗಳನ್ನು ಮಾಡಿದ್ದೆ, ಕರ್ಮದ ಫಲವಾಗಿ ನೀನಿಂದು ಮರಣ ಹೊಂದುವ ದಿನವಾಗಿತ್ತು. ಆದರೆ, ನೀನಿಷ್ಟು ದಿನ ಮಾಡಿದ ಪೂಜೆ, ಪುನಸ್ಕಾರ, ದೇವರ ಅನುಗ್ರಹದಿಂದ ಒಂದು ಮುಳ್ಳು ನಿನ್ನ ಕಾಲಿಗೆ ಚುಚ್ಚು ಮೂಲಕ ಪಾರಾಗದ್ದೀಯ. ಅವನು ಈ ಜನ್ಮದಲ್ಲಿ ಮಹನ್ ಸಾಧ್ವಿ ದೇವರ ಬಗ್ಗೆ ಅಪಾರ ಭಕ್ತಿಯುಳ್ಳವನಾಗಿದ್ದ ಹಾಗಾಗಿ ಆತನು ಈ ಜನ್ಮದಲ್ಲಿ ಶ್ರೀಮಂತನಾಗಿದ್ದಾನೆ. ಆದರೆ ಈ ಜನ್ಮದಲ್ಲಿ ಮಾಡುತ್ತಿರುವ ಪಾಪಗಳಿಂದಾಗಿ ಆಗರ್ಭ ಶ್ರೀಮಂತನಾಗಬೇಕಾದವನು ಕೇವಲ ಶ್ರೀಮಂತನಾಗಿ ಉಳಿದಿದ್ದಾನೆ ಎಂದು ಹೇಳುತ್ತಾರೆ. ಇದರ ಬಳಿಕ ಆಸ್ತಿಕನು ಮತ್ತೆ ತನ್ನನ್ನು ದೇವರ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾನೆ...

ಶ್ರೀಕೃಷ್ಣ ಅರ್ಜುನನ್ನು ಕುರಿತು, 'ಅರ್ಜುನ... ಈಗ ನಿನಗೆ ತಿಳಿಯಿತೇ.? ದೇವರೆ ಎಲ್ಲವನ್ನೂ ಮೊದಲೇ ತಿಳಿದಿರುತ್ತಾನೆ. ನಾವು ನಮ್ಮ ಫಲವನ್ನು ಪಡೆದುಕೋಳ್ಳಲು ಆತುರ ಪಡಬಾರದು. ದೇವರೆ ನೀಡುವ ತನಕ ತಾಳ್ಮೆಯಿಂದ ಕಾಯಬೇಕು' ಎಂದು ಹೇಳುತ್ತಾನೆ...

★






ಕನ್ನಡ ಹಬ್ಬ ಕಾರ್ಯಕ್ರಮ, ಅಭಿನವ ಭಾರತಿ ಪಿಯು ಕಾಲೇಜು, ಮಂಡ್ಯ






ಪಿಯುಸಿ ಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ,
ಅಭಿನವ ಭಾರತಿ ಪಿಯು ಕಾಲೇಜು, ಮಂಡ್ಯ







ಅಭಿನವ ಉತ್ಸವ, ಅಭಿನವ ಭಾರತಿ ಪಿಯು ಕಾಲೇಜು, ಮಂಡ್ಯ

Reg. No.: KARKAN/2013/52928
Post No.: KA/SK/MND/978/2020-20222



ಮೈಸೂರಿನಲ್ಲಿ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕ್ರೀಡಾಕೂಟ 2025–26, ಮೈಸೂರು ವಲಯದ ಥ್ರೋಬಾಲ್ (ಮಹಿಳೆಯರು) ಸ್ಪರ್ಧೆಯಲ್ಲಿ ನಮ್ಮ ಬಿ.ಫಾರ್ಮ್ ವಿದ್ಯಾರ್ಥಿಗಳು ನಾಲ್ಕನೇ ಸ್ಥಾನ ಪಡೆದಿದ್ದಾರೆ.







26/06/2025 ರಂದು ನಡೆದ ಅಂತರರಾಷ್ಟ್ರೀಯ ಮಾದಕ ದ್ರವ್ಯ ದುರುಪಯೋಗ ವಿರೋಧಿ ದಿನ ಅಂಗವಾಗಿ ನಡೆದ ಮಾದಕ ದ್ರವ್ಯಗಳ ವಿರೋಧಿ ಜಾಗೃತಿ ರ್‍ಯಾಲಿಯಲ್ಲಿ ಅಭಿನವ ಭಾರತಿ ಫಾರ್ಮಸಿ ಕಾಲೇಜಿನ ವಿದ್ಯಾಥಿಗಳು ಸಕ್ರಿಯವಾಗಿ ಭಾಗವಹಿಸಿದರು.